ಸಂಪುಟ 01 । ಸಂಚಿಕೆ 202 ಶನಿವಾರ 26 ಸೆಪ್ಟೆಂಬರ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ವಿಶ್ವ ಪರಿಸರ ಆರೋಗ್ಯ ದಿನ (World Environmental Health Day)
ಪರಿಸರ ಮತ್ತು ಮಾನವ ಆರೋಗ್ಯದ ನಡುವಿನ ಸಂಬಂಧದ ಬಗ್ಗೆ ಜಾಗೃತಿ ಮೂಡಿಸುವ ದಿನ. ಭಾರತದ ಆರೋಗ್ಯ ಸಚಿವಾಲಯದ ಓಅಆಅ ಕೂಡ ಸೆಪ್ಟೆಂಬರ್ 26 ಅನ್ನು ಈ ದಿನವಾಗಿ ಪಟ್ಟಿ ಮಾಡಿದೆ.

2)ವಿಶ್ವ ಗರ್ಭನಿರೋಧಕ ದಿನ (World Contraception Day)
ಕುಟುಂಬ ಯೋಜನೆ ಮತ್ತು ಸಂತಾನೋತ್ಪತ್ತಿ ಆರೋಗ್ಯದ ಕುರಿತು ಸರಿಯಾದ ಮಾಹಿತಿಯ ಮಹತ್ವವನ್ನು ತಿಳಿಸುವ ಜಾಗೃತಿ ದಿನ.

3)ಯುರೋಪಿಯನ್ ಭಾಷಾ ದಿನ (European Day of Languages) ಭಾಷಾ ವೈವಿಧ್ಯತೆ, ಬಹುಭಾಷಾ ಕಲಿಕೆ ಮತ್ತು ವಿವಿಧ ಸಂಸ್ಕೃತಿಗಳ ನಡುವಿನ ಅರಿವನ್ನು ಉತ್ತೇಜಿಸುವ ದಿನ. 2001ರಿಂದ ಸೆಪ್ಟೆಂಬರ್ 26ರಂದು ಆಚರಿಸಲಾಗುತ್ತದೆ.

ಸುಭಾಷಿತ

ನಾವು ಪ್ರತಿದಿನ ಪಾಲಿಸುವ ಸಣ್ಣ ಸಣ್ಣ ಶಿಸ್ತುಗಳು, ನಮ್ಮ ಬದುಕಿನಲ್ಲಿ ಶಾಶ್ವತ ಬದಲಾವಣೆಗಳನ್ನು ತರಬಲ್ಲವು.

-ಜಿಮ್ ರೌನ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಪೌರಕಾರ್ಮಿಕರಿಗೆ ಭರ್ಜರಿ ಗುಡ್ ನ್ಯೂಸ್ ಕೊಟ್ಟ ಸಿಎಂ ಡಿ.ಕೆ.ಶಿವಕುಮಾರ್

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: "ಶ್ರಮದಲ್ಲೇ ಶಿವನನ್ನು ಕಾಣುವ ನಿತ್ಯ ನೈರ್ಮಲ್ಯಗಾರರು ಪೌರ ಕಾರ್ಮಿಕರು. ಇವರು ನಿಜವಾದ ಕರ್ಮಯೋಗಿ, ಕಾಯಕಜೀವಿಗಳು, ಸ್ವಚ್ಛತೆ ಕ್ರಾಂತಿಯ ಸರದಾರರು. ಪೌರಕಾರ್ಮಿಕರ ಭತ್ಯೆ ಏರಿಕೆ, ಉಪಹಾರ ಭತ್ಯೆಯನ್ನು 35ರಿಂದ 70 ರೂ.ಗೆ ಏರಿಕೆ ಮಾಡಿ ಸಧ್ಯದಲ್ಲೇ ಆದೇಶ ಹೊರಡಿಸಲಾಗುವುದು" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಘೋಷಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಶುಕ್ರವಾರ ನಡೆದ ಪೌರ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಸಿಎಂ ಡಿ ಕೆ ಶಿವಕುಮಾರ್ ಅವರು ಮಾತನಾಡಿದರು. "ನಿಮ್ಮೆಲ್ಲರ ಬದುಕಿನಲ್ಲಿ ನೀವು ಯಾವತ್ತಿಗೂ ಕೀಳರಿಮೆಯಿಂದ ಮಾನಸಿಕವಾಗಿ ಕುಗ್ಗಬಾರದು. ನೀವು ದೇಶಸೇವೆ ಮಾಡುತ್ತಿರುವುದಾಗಿ ಸ್ವಾಭಿಮಾನದಿಂದ ಬದುಕಿ. ಪೌರಕಾರ್ಮಿಕರಿಲ್ಲದೆ ನಾವು ಆರೋಗ್ಯವಾಗಿರಲು ಸಾಧ್ಯವಿಲ್ಲ. ನಮ್ಮ ಸರ್ಕಾರ ಬಂದ ನಂತರ ಏನೇ ಒತ್ತಡವಿದ್ದರೂ ಸಾವಿರಾರು ಜನ ಪೌರಕಾರ್ಮಿಕರನ್ನು ಖಾಯಂ ಮಾಡಿದ್ದು, ಉಳಿದವರನ್ನು ಖಾಯಂ ಮಾಡಲಾಗುವುದು. ಬಿಡ್ಲ್ಯೂಎಸ್ ಎಸ್ ಬಿ, ನೀರು ಸರಬರಾಜು ಇಲಾಖೆಗಳಲ್ಲಿ ಖಾಯಂ ಆಗಿ ಸ್ವಾಭಿಮಾನದ ಬದುಕು ನೀಡಲು ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ. ನೀವಿಲ್ಲ ಎಂದರೆ ಮಹಾನಗರ, ಪಟ್ಟಣಗಳು ಸ್ವಚ್ಛವಾಗಿರುವುದಿಲ್ಲ" ಎಂದು ಭರವಸೆ ನೀಡಿದರು.

"ನಿಮ್ಮ ಸಂಘಟನೆಯಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಹೇಳುವಂತೆ ನಾನು ಬಸವಂತಪ್ಪನವರಿಗೆ ಹೇಳಿದೆ. ನಿಮ್ಮ ಅಧ್ಯಕ್ಷರುಗಳೇ ನಿಮ್ಮ ಕೆಲಸ ಖಾಯಂ ಮಾಡಲು ಅಡ್ಡಿಪಡಿಸುತ್ತಿದ್ದಾರೆ ಎಂಬ ಅಂಶವನ್ನು ನನ್ನ ಗಮನಕ್ಕೆ ತಂದರು. ಈ ವಿಚಾರವನ್ನು ಜನರ ಮುಂದೆಯೇ ಪ್ರಸ್ತಾಪಿಸಿ ಎಂದು ನಾನು ಸೂಚಿಸಿದೆ. ಕಾರಣ ನೀವು ಜಾಗೃತರಾಗಬೇಕು. ನಾನು ಇಲ್ಲಿಂದಲೇ ಅಧಿಕಾರಿಗಳಿಗೆ ಆದೇಶ ನೀಡುತ್ತಿದ್ದೇನೆ" ಎಂದು ಆತ್ಮಸ್ಥೈರ್ಯ ತುಂಬಿದರು.

ಪೌರ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಸಚಿವ ಸಂಪುಟ ಉಪ ಸಮಿತಿ ರಚನೆ "ಇಂತಹ ಸಮಸ್ಯೆಗಳನ್ನು ಬಗೆಹರಿಸಬೇಕು ಎಂಬ ಕಾರಣಕ್ಕೆ ನಾವು ಪ್ರಜಾಸೇವೆ ಇಲಾಖೆ ಆರಂಭಿಸಿದ್ದೇವೆ. ಯಾವ ಸಂಘಟನೆಯ ಮಧ್ಯವರ್ತಿಗಳು ಅಗತ್ಯವಿಲ್ಲ. ನಿಮ್ಮ ಸಮಸ್ಯೆಗಳನ್ನು ಬಾಲಕೃಷ್ಣ, ಯತೀಂದ್ರ, ಮುನಿಯಪ್ಪನವರು ಹಾಗೂ ಬಸವಂತಪ್ಪನವರು ತಿಳಿಸಿದ್ದಾರೆ. ನಿಮ್ಮ ಮಂಡಳಿ, ಯೋಗ ಕ್ಷೇಮ, ಕಲ್ಯಾಣ ನಿಧಿ ವಿಚಾರದಲ್ಲಿ ನಾನು ಗಮನಹರಿಸಬೇಕಾಗಿದ್ದು, ಇದಕ್ಕಾಗಿ ಸಮಾಜಕಲ್ಯಾಣ, ನಗರಾಭಿವೃದ್ಧಿ ಇಲಾಖೆ ಸೇರಿದಂತೆ ಬಸವಂತಪ್ಪನವರನ್ನು ಒಳಗೊಂಡಂತೆ ಸಂಪುಟ ಉಪಸಮಿತಿ ರಚಿಸಿ, ಆರ್ಥಿಕ ಇಲಾಖೆ ವಿಶ್ವಾಸ ಪಡೆದು ತೀರ್ಮಾನ ಮಾಡಲಾಗುವುದು" ಎಂದು ಹೇಳಿದರು.

"ಪ್ರತಿನಿತ್ಯ ನಿಮಗೆ ನೀಡುವ ಜವಾಬ್ದಾರಿಯಲ್ಲಿ 60% ಜನ ಪ್ರಾಮಾಣಿಕವಾಗಿ ಮಾಡುತ್ತೀರಿ. ಉಳಿದಷ್ಟು ಜನ ಮೈಗಳ್ಳರು, ಮಹಿಳೆಯರ ಮೇಲೆ ದರ್ಪ ತೋರುವವರು ನಿಮ್ಮಲ್ಲೇ ಇದ್ದಾರೆ. ಇದರ ಬಗ್ಗೆ ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಲಾಗುವುದು. ನೀವುಗಳು ಇಲ್ಲದಿದ್ದರೆ ನಗರ ತಿಪ್ಪೆಗುಂಡಿಯಾಗುತ್ತದೆ ಎಂಬ ಅರಿವಿದೆ. ನೀವಿದ್ದರೆ ರಸ್ತೆ, ನಗರ ಎಲ್ಲವೂ ಸುಂದರ. ಹೀಗಾಗಿ ನಿಮ್ಮನ್ನು ಸ್ವಚ್ಛತೆಯ ರಾಯಭಾರಿಗಳು ಎಂದು ಗೌರವಯುತವಾಗಿ ಕಾಣುತ್ತಿದೆ. ನಿಮ್ಮ ಆರೋಗ್ಯಕ್ಕೆ ಗ್ಯಾರಂಟಿ ನೀಡುವುದು ನಮ್ಮ ಬದ್ಧತೆಯಾಗಿದೆ. ಸಮಾಜ ನಿಮ್ಮ ಮೇಲೆ ಅವಲಂಬಿತವಾಗಿದೆ. ನಿಮ್ಮ ಕೆಲಸ ದೇವರ ಸೇವೆಗೆ ಸಮಾನ ಎಂದು ಅಧಿಕಾರಿಗಳು ಹಾಗೂ ಸಾಮಾನ್ಯ ಜನ ಕಾಣುವಂತಾಗಬೇಕು" ಎಂದು ತಿಳಿಸಿದರು.

ಸರ್ವರಿಗೂ ಸಮಬಾಳು, ಸಮ ಪಾಲು ಎಂಬ ತತ್ವ ಪಾಲನೆ "ಇಡೀ ದೇಶಕ್ಕೆ ನಮ್ಮ ಸರ್ಕಾರ ಹೊಸ ಸಂದೇಶ ನೀಡಿದೆ. ನಿಮ್ಮ ಪೌರಕಾರ್ಮಿಕನ ಮಗನನ್ನು ಭಗವಂತನ ಸೇವೆ ಮಾಡುವ ಮುಜರಾಯಿ ಇಲಾಖೆ ಸಚಿವರನ್ನಾಗಿ ಮಾಡಿ. ಸರ್ವರಿಗೂ ಸಮಬಾಳು, ಸಮ ಪಾಲು ಎಂಬ ತತ್ವವನ್ನು ಪಾಲಿಸಿದ್ದೇವೆ. ಒಂದು ಕಾಲದಲ್ಲಿ ದೇವಾಲಯದ ಒಳಗೆ ನಿರ್ಬಂಧ ಹೇರಲಾಗಿತ್ತು. ಅಂತಹ ತಾರತಮ್ಯ ನಿಲ್ಲಬೇಕು ಎಂದು ನಾನು ಪೌರ ಕಾರ್ಮಿಕನ ಮಗನಿಗೆ ಈ ಇಲಾಖೆ ಜವಾಬ್ದಾರಿ ನೀಡಲಾಗಿದೆ. ಅವರಿಗೆ ಗೌರವ ಹಾಗೂ ಶಕ್ತಿ ಬರಬೇಕು ಎಂದು ಮೀನುಗಾರಿಕೆ, ಬಂದರು ಸಚಿವಾಲಯವನ್ನು ನೀಡಲಾಗಿದೆ" ಎಂದರು.

ಕಾಂಗ್ರೆಸ್ ಸರ್ಕಾರ ಹಾಗೂ ಪೌರ ಕಾರ್ಮಿಕರ ನಡುವೆ ಭಕ್ತ-ಭಗವಂತನ ಸಂಬಂಧ "ನಿಮ್ಮ ಕೈಗೆ ಭದ್ರತೆ ನೀಡಬೇಕು ಎಂಬು. 2017ರಲ್ಲಿ ನಮ್ಮ ಸರ್ಕಾರ 10 ಸಾವಿರ ಪೌರ ಕಾರ್ಮಿಕರನ್ನು ನೇಮಕ ಮಾಡಲಾಗಿತ್ತು. 2023ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ಅಧಿಕಾರಕ್ಕೆ ಬಂದ ನಂತರ 12,609 ಪೌರ ಕಾರ್ಮಿಕರನ್ನು ಖಾಯಂ ಮಾಡಿ ಇತಿಹಾಸವನ್ನು ನಿರ್ಮಿಸಿದೆ. ಒಂದು ರೂಪಾಯಿ ಭ್ರಷ್ಟಾಚಾರವಿಲ್ಲದೆ ಸರ್ಕಾರಿ ಕೆಲಸ ನೀಡಿದ್ದೇವೆ. ನಿಮಗೆ 40 ಸಾವಿರ ವೇತನ ನೀಡುವಂತೆ ಆದೇಶ ಮಾಡಿದೆವು. ಸ್ಥಳೀಯ ಸಂಸ್ಥೆಗಳಲ್ಲಿ 6 ಸಾವಿರ ಜನರನ್ನು ನೇಮಕ ಮಾಡಲಾಗಿದೆ. ಇನ್ನಷ್ಟು ನೇಮಕಾತಿ ಮಾಡಬೇಕು ಎಂದು ಚರ್ಚೆ ಮಾಡಿದ್ದೇವೆ" ಎಂದು ತಿಳಿಸಿದರು.

"ದೇವರಾಜ ಅರಸು ಅವರ ಕಾಲದಿಂದ ಪೌರ ಕಾರ್ಮಿಕರ ಬಗ್ಗೆ ಸರ್ಕಾರ ಚಿಂತನೆ ನಡೆಸಿದ್ದರೆ ಅದು ಕಾಂಗ್ರೆಸ್ ಸರ್ಕಾರ. ಪೌರ ಕಾರ್ಮಿಕರು ಹಾಗೂ ಸರ್ಕಾರದ ನಡುವೆ ಇರುವುದು ಭಕ್ತ ಹಾಗೂ ಭಗವಂತ ನಡುವಣ ಸಂಬಂಧ. ನಿಮ್ಮ ಮನೆ ನಿರ್ಮಾಣಕ್ಕೆ 7.50 ಲಕ್ಷ ನೀಡಲು ತೀರ್ಮಾನಿಸಿದ್ದೇವೆ" ಎಂದರು.

ಪೌರ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಕೆಪಿಎಸ್ ಮಾದರಿಯಲ್ಲಿ ವಸತಿ ಶಾಲೆಗಳ ನಿರ್ಮಾಣ "ನಿಮ್ಮ ಮಕ್ಕಳಿಗಾಗಿ ನಗರ ಪ್ರದೇಶಗಳಲ್ಲಿ ಕೆಪಿಎಸ್ ಮಾದರಿಯ ವಸತಿ ಶಾಲೆಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಿದೆ. ನಿಮ್ಮ ಮಕ್ಕಳು ಓದಿ, ನಾಯಕರಾಗಿ ಬೆಳೆದು, ಹೊಸ ಉದ್ಯೋಗಗಳನ್ನು ಸೃಷ್ಟಿಸುವಂತಾಗಬೇಕು. ನಿಮ್ಮ ಮಕ್ಕಳು ಐಎಎಸ್ ಹಾಗೂ ಕೆಎಎಸ್ ಆಗಬೇಕು ಎಂಬುದು ನಮ್ಮ ಚಿಂತನೆ. ಈ ಸಂಬಂಧ ಸಚಿವರೊಂದಿಗೆ ಚರ್ಚೆ ಮಾಡಲಾಗುವುದು. ನಿಮಗಾಗಿ ಪ್ರತ್ಯೇಕ ಭವನ ನಿರ್ಮಾಣಕ್ಕೆ ಬೇಡಿಕೆ ಇಟ್ಟಿದ್ದು, ಇದನ್ನು ನಿರ್ಮಾಣ ಮಾಡುವ ಜಾಗ ನನ್ನ ತಲೆಯಲ್ಲಿದೆ. ಮುಂದಿನ ಎರಡು ತಿಂಗಳಲ್ಲಿ ಪೌರ ಭವನ ನಿರ್ಮಾಣ ಪ್ರಾರಂಭಿಸಲಾಗುವುದು. ಪ್ರತಿ ವರ್ಷ ಪೌರ ಕಾರ್ಮಿಕ ದಿನ ಕಾರ್ಯಕ್ರಮವನ್ನು ಸರ್ಕಾರದಿಂದ ನಡೆಸಲಾಗುವುದು" ಎಂದು ತಿಳಿಸಿದರು.

"ಉಪಾಹಾರ- ಊಟವಷ್ಟೇ ನಮ್ಮ ಚಿಂತನೆಯಲ್ಲ. ನಿಮ್ಮ ಬದುಕಿನ ಬಗ್ಗೆ ನಾವು ಆಲೋಚಿಸುತ್ತಿದ್ದೇವೆ. ಕೋವಿಡ್ ಸಮಯದಲ್ಲಿ ಕಾರ್ಮಿಕರಿಂದ ಮೂರು ಪಟ್ಟು ಬಸ್ ಟಿಕೆಟ್ ದರ ಪಡೆಯುವಾಗ ನಾವು ಕಾಂಗ್ರೆಸ್ ಪಕ್ಷದಿಂದ 1 ಕೋಟಿ ನೀಡಿ ಉಚಿತ ಪ್ರಯಾಣಕ್ಕೆ ಆಗ್ರಹಿಸಿದೆವು. ನಿಮ್ಮಲ್ಲಿ ಅನೇಕ ಆಟೋ ಚಾಲಕರು ಇದ್ದಾರೆ. ಮುಂದಿನ ವಾರ ಚಾಲಕರನ್ನು ಕರೆಸಿ ಸಮಸ್ಯೆ ಆಲಿಸಲಾಗುವುದು. ಡಿ ಕೆ ಶಿವಕುಮಾರ್ ಹಾಗೂ ಕಾಂಗ್ರೆಸ್ ಸರ್ಕಾರ ನಿಮ್ಮ ಜತೆಗೆ ನಿಲ್ಲುತ್ತೇವೆ. ನಿಮ್ಮದು ಕೇವಲ ಕಸ ತೆಗೆಯುವ ಕೈಗಳಲ್ಲ, ಕರ್ನಾಟಕವನ್ನು ಪಾಡುವ ಕೈಗಳು" ಎಂದು ಬಣ್ಣಿಸಿದರು.



ದಿವಂಗತ ಎ. ವೆಂಕಟೇಶ್ ನಾಯಕ ಪುತ್ರರಿಂದ ಅರಕೇರಾ ನೂತನ ತಹಶೀಲ್ದಾರ್ ಕಚೇರಿಗೆ 1 ಎಕರೆ 22 ಗುಂಟೆ ಭೂದಾನ

❑ ನೈಜ್ಯ ದೆಸೆ ನ್ಯೂಸ್

ಅರಕೇರಾ: ತಾಲೂಕಿನ ಅರಕೇರಾ ಸೀಮೆಯಲ್ಲಿ ನೂತನ ತಹಶೀಲ್ದಾರ್ ಕಚೇರಿ ನಿರ್ಮಾಣಕ್ಕಾಗಿ ದಿವಂಗತ ಶ್ರೀ ಎ. ವೆಂಕಟೇಶ್ ನಾಯಕ ಅವರ ಪುತ್ರರಾದ ಶ್ರೀ ಬಿ.ವಿ. ನಾಯಕ ಹಾಗೂ ಶ್ರೀ ಎ. ರಾಜಶೇಖರ್ ನಾಯಕ ಅವರು ತಮ್ಮ ಹೆಸರಿನಲ್ಲಿರುವ 1 ಎಕರೆ 22 ಗುಂಟೆ ಜಮೀನನ್ನು ಭೂದಾನವಾಗಿ ನೀಡಿದ್ದಾರೆ.

ಸರ್ಕಾರಿ ಕಚೇರಿ ನಿರ್ಮಾಣಕ್ಕೆ ಅಗತ್ಯವಿರುವ ಜಮೀನನ್ನು ಸ್ವಯಂಪ್ರೇರಿತವಾಗಿ ನೀಡುವ ಮೂಲಕ ಅವರು ಸಾರ್ವಜನಿಕ ಹಿತಾಸಕ್ತಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಈ ಭೂದಾನದಿಂದ ಅರಕೇರಾ ತಾಲೂಕಿನ ಆಡಳಿತಾತ್ಮಕ ಅಭಿವೃದ್ಧಿಗೆ ಸಹಕಾರಿಯಾಗುವುದರ ಜೊತೆಗೆ, ಸಾರ್ವಜನಿಕರಿಗೆ ಸರ್ಕಾರಿ ಸೇವೆಗಳು ಇನ್ನಷ್ಟು ಸುಲಭವಾಗಿ ದೊರೆಯುವ ನಿರೀಕ್ಷೆ ಇದೆ.

ಜನರ ಅನುಕೂಲಕ್ಕಾಗಿ ಕೈಗೊಂಡಿರುವ ಈ ಭೂದಾನ ಕಾರ್ಯವು ಜನಪರ ಕಾಳಜಿ ಹಾಗೂ ಸಮಾಜಮುಖಿ ಸೇವೆಗೆ ಮಾದರಿಯಾಗಿದೆ ಎಂದು ಕಾಂಗ್ರೆಸ್ ಮುಖಂಡ ಸಾಬಣ್ಣ ಪೂಜಾರಿ ಗಾಣದಾಳ್ ಅವರು 'ನೈಜ ದೆಸೆ ಕನ್ನಡ' ದಿನಪತ್ರಿಕೆಗೆ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಚನ್ನಬಸವನಾಯಕ ಮ್ಯಾಕಲದೊಡ್ಡಿ, ಆಖಖ ರಾಜ್ಯ ಸಂಘಟನಾ ಸಂಚಾಲಕ ಶಿವಪ್ಪ ಪಲಕನಮರಡಿ, ಶಿವು ಪಾಟೀಲ್, ರಮೇಶ್ ಮ್ಯಾಕಲದೊಡ್ಡಿ, ಖಾಜೇಸಾಬ್ ಪಲಕನಮರಡಿ ಹಾಗೂ ಧರ್ಮಣ್ಣ ಮದರಕಲ್ ಸೇರಿದಂತೆ ಕಾಂಗ್ರೆಸ್ ಪದಾಧಿಕಾರಿಗಳು ಉಪಸ್ಥಿತರಿದ್ದರು.



ವೃತ್ತಿಪರ ಶಿಕ್ಷಣಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಲ, ಕಂಪ್ಲಿಯ 44 ವಿದ್ಯಾರ್ಥಿಗಳಿಗೆ ಒಲಿದ 'ಸುಜ್ಞಾನ ನಿಧಿ' ಶಿಷ್ಯವೇತನ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: "ವಿದ್ಯಾರ್ಥಿಗಳು ಕೇವಲ ಅಂಕ ಗಳಿಕೆಗೆ ಸೀಮಿತವಾಗದೆ, ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವತ್ತ ಜಾಗೃತಿ ಬೆಳೆಸಿಕೊಳ್ಳಬೇಕು" ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್‌ನ ನಿರ್ದೇಶಕ ರೋಹಿತಾಶ್ವ ಹೇಳಿದರು.

ತಾಲೂಕಿನ ಯೋಜನಾ ಕಛೇರಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ 'ಸುಜ್ಞಾನ ನಿಧಿ ಶಿಷ್ಯವೇತನ' ಮಂಜೂರಾತಿ ಪತ್ರ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು."ಯೋಜನೆಯ ಪಾಲುದಾರ ಕುಟುಂಬಗಳ ಬಡ ಮಕ್ಕಳು ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ಪ್ರತಿ ವರ್ಷ ಸಂಸ್ಥೆಯ ವತಿಯಿಂದ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ರಾಜ್ಯಾದ್ಯಂತ 1,18,000 ವಿದ್ಯಾರ್ಥಿಗಳಿಗೆ ?32.44 ಕೋಟಿ ಮೌಲ್ಯದ ಶಿಷ್ಯವೇತನ ಒದಗಿಸಲಾಗಿದೆ. ಈ ಬಾರಿ ಕಂಪ್ಲಿ ತಾಲೂಕಿನ ಸುಮಾರು 44 ವಿದ್ಯಾರ್ಥಿಗಳಿಗೆ ಈ ಯೋಜನೆಯ ಲಾಭ ಸಿಕ್ಕಿದೆ" ಎಂದು ಅವರು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ವೀರಶೈವ ಸಂಘದ ತಾಲೂಕು ಅಧ್ಯಕ್ಷ ಎಸ್. ಎಂ.ನಾಗರಾಜ, ಪುರಸಭೆ ಮಾಜಿ ಸದಸ್ಯ ಎನ್. ರಾಮಾಂಜನೇಯ, ವಿಶ್ವಕರ್ಮ ಸಮಾಜದ ಕಾರ್ಯದರ್ಶಿ ಡಿ.ಮೌನೇಶ್, ವಾಸವಿ ವಿದ್ಯಾಸಂಸ್ಥೆ ನಿಕಟಪೂರ್ವ ಅಧ್ಯಕ್ಷ ಡಿ.ಶ್ರೀಧರ ಶ್ರೇಷ್ಠಿ, ಜಿಲ್ಲಾ ಜನ ಜಾಗೃತಿ ವೇದಿಕೆ ಕೋಶಾಧಿಕಾರಿ ಡಾ.ಸಿ.ವೆಂಕಟೇಶ ಬರಮಕ್ಕನವರ್, ಯೋಜನಾಧಿಕಾರಿ ಎಲ್.ರಾಘವೇಂದ್ರ, ಕೃಷಿ ಅಧಿಕಾರಿ ಎಸ್.ಬಿ. ಸಂಜುಕುಮಾರ್ ಹಾಗೂ ಮೇಲ್ವಿಚಾರಕ ಮಂಜುನಾಥ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



ಲಿಂಗಸೂಗೂರಿನ ಸಹಬಾ ಮಸ್ಜಿದ್‌ನಲ್ಲಿ ಅಂಜುಮನ್ ಕಮಿಟಿಯಿಂದ ಮಕ್ತಬ್ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿ ವಿತರಣೆ

❑ ನೈಜ್ಯ ದೆಸೆ ನ್ಯೂಸ್

ಲಿಂಗಸೂಗೂರು: ಹಜರತ್ ಮೊಹಮ್ಮದ್ ಪೈಗಂಬರ್ (ಸ) ಅವರ ಪವಿತ್ರ ಜನ್ಮದಿನದ ಪ್ರಯುಕ್ತ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿ ವತಿಯಿಂದ ಲಿಂಗಸೂಗೂರು ಪಟ್ಟಣದ ಸಹಬಾ ಮಸ್ಜಿದ್‌ನ ಮಕ್ತಬ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬ್ಯಾಗ್, ಬೂಟು, ಪುಸ್ತಕ ಹಾಗೂ ಪೆನ್ನುಗಳನ್ನು ವಿತರಿಸುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು.


ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವುದು ಹಾಗೂ ಶಿಕ್ಷಣದ ಬಗ್ಗೆ ಆಸಕ್ತಿ ಬೆಳೆಸುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಮಕ್ತಬ್‌ನ ಎಲ್ಲಾ ವಿದ್ಯಾರ್ಥಿಗಳಿಗೆ ಅಗತ್ಯ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ಅಧ್ಯಕ್ಷರಾದ ಹುಸೇನ್ ಭಾಷಾ ಅವರು, "ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಮಕ್ತಬ್ ಶಿಕ್ಷಣದ ಜೊತೆಗೆ ಶಾಲಾ ಶಿಕ್ಷಣಕ್ಕೂ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ತೋರಬೇಕು. ಆರ್ಥಿಕವಾಗಿ ಅಥ-ವಾ ಶೈಕ್ಷಣಿಕವಾಗಿ ಯಾವುದೇ ವಿದ್ಯಾರ್ಥಿಗೂ ಕೊರತೆ ಉಂಟಾಗಬಾರದು ಎಂಬ ಉದ್ದೇಶದಿಂದ ಅಂಜುಮನ್ ಕಮಿಟಿ ಇಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮುಂದಿನ ದಿನಗಳಲ್ಲಿಯೂ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅಗತ್ಯವಾದ ಸಹಕಾರವನ್ನು ನೀಡಲು ಕಮಿಟಿ ಸದಾ ಸಿದ್ಧವಾಗಿದೆ" ಎಂದು ಹೇಳಿದರು.

ಮುಂದುವರಿದು ಅವರು, "ಇಂದಿನ ಮಕ್ಕಳು ನಾಳಿನ ಸಮಾಜದ ಭವಿಷ್ಯವಾಗಿದ್ದು, ಅವರ ಶಿಕ್ಷಣ ಮತ್ತು ಉತ್ತಮ ಭವಿಷ್ಯಕ್ಕಾಗಿ ಸಮುದಾಯದ ಹಿರಿಯರು ಹಾಗೂ ಸಂಘ-ಸಂಸ್ಥೆಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕು. ಮಕ್ಕಳಲ್ಲಿ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ, ಶಿಸ್ತು ಹಾಗೂ ಸಾಮಾಜಿಕ ಜವಾಬ್ದಾರಿಯ ಮನೋಭಾವ ಬೆಳೆಸುವುದು ಅಗತ್ಯವಾಗಿದೆ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಲಿಂಗಸೂಗೂರು ಪಟ್ಟಣದ ಸಹಬಾ ಮಸ್ಜಿದ್ ಕಮಿಟಿಯ ಖಜಾಂಚಿ ಇಮಾಮ್ ಸಾಬ್, ಹಾಫಿಜ್ ಸಮೀರ್ ಸಾಬ್, ಹಾಫಿಜ್ ಚಾಂದ್ ಪಾಷಾ ಸಾಬ್, ಗುಲ್ಲು ಮಾಮು, ಇಕ್ಬಾಲ್ ಮೌಜ್ಜನ್ ಸಾಬ್, ಅಮೀನುದ್ದಿನ್ ರೆಡಿಯಟರ್, ಅಬ್ದುಲ್, ಇಮ್ತಿಯಾಜ್, ದಾದಾಪೀರ್, ಜಾವೀದ್ ಸೇರಿದಂತೆ 5ನೇ ವಾರ್ಡಿನ ಗುರುಹಿರಿಯರು ಹಾಗೂ ಸಹೋದರರು ಉಪಸ್ಥಿತರಿದ್ದರು.

ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ಗೌರವ ಅಧ್ಯಕ್ಷರಾದ ಅನ್ವರುದ್ದಿನ್, ಅಧ್ಯಕ್ಷರಾದ ಹುಸೇನ್ ಭಾಷಾ, ಉಪಾಧ್ಯಕ್ಷರಾದ ಮುಸ್ತಫಾ, ಪ್ರಧಾನ ಕಾರ್ಯದರ್ಶಿ ಸಲೀಂ ಪಾಷಾ ಕಾರ್ಪೆಂಟರ್, ವಸೀಂ ಪಾಷಾ, ಕಲೀಂ ಭಾಯಿ, ಅಮೀನುದ್ದಿನ್ ಟೈಲರ್, ರೋಹಿತ್ ಭಾಯಿ, ಪಾಪು, ವಸೀಂ ಅಕ್ರಂ, ಶೇಖ್ ಅಲಿ, ನಸೀಮ್, ಅಲ್ಲಾಬಕ್ಷ, ಉಬೆದ್ ಚೌಧ್ರಿ, ಆರೀಫ್, ಆಸೀಫ್, ಆದಿಲ್, ಉಮರ್, ಸದ್ದಾಂ, ಅಬ್ಬಾಸ್, ಅಜ್ಮೀರ್, ಕೈಫ್ ಮೊಹಮ್ಮದ್ ಸೇರಿದಂತೆ ಕಮಿಟಿಯ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಅಗತ್ಯ ಸಹಕಾರ ನೀಡುವ ಮೂಲಕ ಸಮುದಾಯದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ಪ್ರಮುಖ ಸಾಮಾಜಿಕ ಕಾಳಜಿಗಳಲ್ಲಿ ಒಂದಾಗಿದೆ ಎಂದು ಕಮಿಟಿಯ ಪದಾಧಿಕಾರಿಗಳು ತಿಳಿಸಿದರು.



ಸಾಹಿತ್ಯ ಸಿಂಚನ

ಒಂದು ಹೊಸ ಆರಂಭ

ಕಳೆದ ದಿನಗಳ ನೋವನ್ನು ಮರೆತು,
ಹೊಸ ಕನಸಿನ ದಾರಿಯಲಿ ನಡೆದು,
ಮೌನದೊಳಗೆ ಭರವಸೆ ಹುಡುಕಿ,
ಮನದ ಬಾಗಿಲಲಿ ಬೆಳಕನು ತೆರೆದು.

ಕಳೆದುಹೋದ ಕ್ಷಣಗಳ ನೆರಳನು ಬಿಟ್ಟು,
ಹೊಸ ಹೆಜ್ಜೆಯೊಂದಿಗೆ ಮುಂದೆ ಸಾಗೋಣ,
ಬಿದ್ದರೂ ಮತ್ತೆ ಎದ್ದು ನಿಂತು,
ಗೆಲುವಿನ ಕನಸನು ಕೈಯಲ್ಲಿ ಹಿಡಿಯೋಣ.

ನಿನ್ನೆ ಒಂದು ಪಾಠವಾಗಿರಲಿ,
ಇಂದು ಹೊಸ ಅವಕಾಶವಾಗಿರಲಿ,
ನಾಳೆ ನಮ್ಮ ಕನಸಿನ ಲೋಕವಾಗಲಿ,
ಪ್ರತಿ ಹೆಜ್ಜೆಯೂ ಸಾಧನೆಯಾಗಲಿ.

ಕತ್ತಲೆಯ ನಂತರ ಬೆಳಕು ಬರುವಂತೆ,
ಮುಗಿದ ಕಥೆಯ ನಂತರ ಪುಟವೊಂದು ತೆರೆದು,
ಹೊಸ ಆಶೆಯ ಬೀಜವನು ಬಿತ್ತಿ,
ಜೀವನಕ್ಕೆ ಹೊಸ ಅರ್ಥವನು ನೀಡೋಣ.

ಪ್ರತಿ ಅಂತ್ಯವೂ ಒಂದು ಆರಂಭ,
ಪ್ರತಿ ಬೆಳಗ್ಗೆಯೂ ಒಂದು ಅವಕಾಶ,
ನಂಬಿಕೆಯೊಂದಿಗೆ ಹೆಜ್ಜೆ ಇಟ್ಟರೆ,
ಹೊಸ ಬದುಕು ನಮ್ಮದಾಗುವುದು.

ಉರ್ದು ಶಾಲೆಯ ಮೈದಾನದಲ್ಲಿ ಮಳೆನೀರು ನಿಂತು ವಿದ್ಯಾರ್ಥಿಗಳಿಗೆ ತೊಂದರೆ: 2 ವರ್ಷಗಳಿಂದ ಮನವಿ ಸಲ್ಲಿಸಿದರೂ ಸ್ಪಂದಿಸದ ಅಧಿಕಾರಿಗಳಿಗೆ SDPI ಕಡಕ್ ಎಚ್ಚರಿಕೆ!

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಿಂಧನೂರಿನ ಗೋಮರ್ಸಿ ಗ್ರಾಮದ ಉರ್ದು ಕಿರಿಯ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ಮಳೆನೀರು ನಿಲ್ಲುತ್ತಿರುವುದರಿಂದ ಶಾಲೆಯ ಮಕ್ಕಳಿಗೆ ಓಡಾಡಲು ಮತ್ತು ವಿದ್ಯಾಭ್ಯಾಸಕ್ಕೆ ತೀವ್ರ ರೀತಿಯ ತೊಂದರೆಯಾಗುತ್ತಿದೆ.

ಈ ಗಂಭೀರ ಸಮಸ್ಯೆಯ ಕುರಿತು SDPI ಪಕ್ಷದ ವತಿಯಿಂದ ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಗ್ರಾಪಂಚಾಯತ್ ನ ಪಿಡಿಒ, ಕ್ಷೇತ್ರ ಶಿಕ್ಷಣ ಅಧಿಕಾರಿ ಗಳು ಸಿಂಧನೂರು ಮತ್ತು ತಾಲೂಕು ಪಂಚಾಯತ್ ಅಧಿಕಾರಿಗಳಿಗೆ ಮನವಿ ಪತ್ರಗಳನ್ನು ಸಲ್ಲಿಸುತ್ತಾ ಬರಲಾಗಿದೆ. ಆದರೂ ಅಧಿಕಾರಿಗಳು ಮಾತ್ರ ಕಣ್ಣುಮುಚ್ಚಿ ಕುಳಿತುಕೊಂಡಿದ್ದು, ಸಮಸ್ಯೆಯನ್ನು



ಪರಿಹರಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಮಕ್ಕಳ ಈ ಗೋಳನ್ನು ನೇರವಾಗಿ ಪರಿಶೀಲಿಸಲು ಇಂದು ಖಆಕಖ ಪಕ್ಷದ ವಿಧಾನಸಭಾ ಕ್ಷೇತ್ರ ಕಾರ್ಯದರ್ಶಿ ಸೈಯದ್ ಇರ್ಫಾನ್, ಹಾಗೂ ವಿಧಾನಸಭಾ ಕ್ಷೇತ್ರ ಸಮಿತಿಯ ನಾಯಕರಾದ ಶೋಹೆಬ್ ನೈಕ್ ನೇರವಾಗಿ ಶಾಲಾ ಮೈದಾನಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿ, ಕೂಡಲೇ ಎಚ್ಚೆತ್ತುಕೊಂಡು ಮೈದಾನದಲ್ಲಿ ನೀರು ನಿಲ್ಲದಂತೆ ಸೂಕ್ತ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಕಡಕ್ ಎಚ್ಚರಿಕೆ ನೀಡಿದ್ದಾರೆ.

ಒಂದು ವೇಳೆ ನಿರ್ಲಕ್ಷ್ಯ ಮುಂದುವರೆದರೆ ಮುಂದಿನ ದಿನಗಳಲ್ಲಿ ಪೋಷಕರು ಹಾಗೂ ಸಾರ್ವಜನಿಕರನ್ನು ಒಗ್ಗೂಡಿಸಿ ಶಾಲಾ ಮೈದಾನದಲಿಯೇ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ವಿಧಾನಸಭಾ ಕ್ಷೇತ್ರ ಕಾರ್ಯದರ್ಶಿ ಸೈಯದ್ ಇರ್ಫಾನ್ ವಿಧಾನಸಭಾ ಸಮಿತಿಯ ಸದಸ್ಯರು ಶೋಹೆಬ್ ನೈಕ್,ಮತ್ತು ಕಾರ್ಯಕರ್ತರಾದ ಸಮೀರ್ ಗಂಗಾನಗರ, ಜೈದ್ ಉಪಸ್ಥಿತರಿದ್ದರು.

ಜಾಲಹಳ್ಳಿ 2ನೇ ವಾರ್ಡ್‌ನಲ್ಲಿ ಮಳೆಗೆ ಮನೆ ಸಂಪೂರ್ಣ ಹಾನಿ: ಅಧಿಕಾರಿಗಳಿಂದ ಸ್ಥಳ ಪರಿಶೀಲನೆ

ಸರ್ಕಾರದ ನೆರವಿನ ನಿರೀಕ್ಷೆಯಲ್ಲಿ ಬಡ ವ್ಯಕ್ತಿ ದಾದಾಪಿರ್

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದ 2ನೇ ವಾರ್ಡ್‌ನಲ್ಲಿ ಸುರಿದ ಭಾರಿ ಮಳೆಯಿಂದ ದಾದಾಪೀರ್ ಎಂಬುವವರ ಮನೆ ಸಂಪೂರ್ಣವಾಗಿ ಹಾನಿಗೊಳಗಾಗಿದೆ.

ದಾದಾಪೀರ್ ಅವರು ಆರ್ಥಿಕವಾಗಿ ಹಿಂದುಳಿದಿದ್ದು, ಕುಟುಂಬ ಹಾಗೂ ಸಂಬಂಧಿಕರ ನೆರವು ಇಲ್ಲದ ಪರಿಸ್ಥಿತಿಯಲ್ಲಿದ್ದಾರೆ. ಮನೆ ಹಾನಿಯಿಂದ ಸಂಕಷ್ಟಕ್ಕೆ ಸಿಲುಕಿರುವ ಅವರು ಸದ್ಯ ಬೇರೆಯವರ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ. ಸರ್ಕಾರ ಹಾಗೂ ಜನಪ್ರತಿನಿಧಿಗಳು ಕೂಡಲೇ ಅಗತ್ಯ ಪರಿಹಾರ ಮತ್ತು ನೆರವು ನೀಡಬೇಕು ಎಂದು ಮನವಿ ಮಾಡಿದ್ದಾರೆ.

ವಾರ್ಡ್ ಮುಖಂಡರಾದ ಹುಸೇನ್ ನಾಸಿ, ರಂಗಪ್ಪ ತೊಗರಿ ಹಾಗೂ ಗ್ರಾಮ



ಪಂಚಾಯಿತಿ ಸದಸ್ಯರು ಸರ್ಕಾರದಿಂದ ಪರಿಹಾರ ದೊರಕಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಹಾನಿಗೊಳಗಾದ ಮನೆಯನ್ನು ಪರಿಶೀಲಿಸಿದರು.


ಅಧಿಕಾರಿಗಳ ಭರವಸೆ ಪರಿಶೀಲನೆ ಬಳಿಕ ಮನೆ ಹಾನಿಯ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಿ, ನಿಯಮಾನುಸಾರ ಪರಿಹಾರ ಹಾಗೂ ಅಗತ್ಯ ನೆರವು ದೊರಕಿಸಲು ಶಿಫಾರಸು ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಬಸವರಾಜ್ ಪಂಪಾಪತಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀ ಮತಿ ಲಕ್ಷ್ಮೀ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಅಯ್ಯಪ್ಪ, ಕಂದಾಯ ಇಲಾಖೆಯ ಭೀಮಣ್ಣ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ವೀರೇಶ್ ಅರಕೇರಿ, ಸದಸ್ಯರಾದ ಮಕ್ತುಮ್ ಪರಾಶಿ, ಕುಮಾರ್ ಚಪ್ಪಳಕಿ, ಶಿವಮಾನ್ಯ ತ್ಯಾಪ್ಲಿ, ಪತ್ರಕರ್ತ ಬಾಬಾ ಮೆಡಿಕಲ್, ಮುಖಂಡರಾದ ಹುಸೇನ್ ನಾಸಿ, ರಂಗಪ್ಪ ತೊಗರಿ, ರಾಜು ತವಗ, ಇರ್ಫಾನ್ ಖುರೇಶಿ, ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ವಾರ್ಡ್ ನಿವಾಸಿಗಳು ಉಪಸ್ಥಿತರಿದ್ದರು.

ಕಳಪೆ ಶೂ ವಿತರಣೆ ಖಂಡಿಸಿ ಬಿಇಒಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ವಿತರಿಸಲಾಗಿರುವ ಕಳಪೆ ಗುಣಮಟ್ಟದ ಶೂಗಳನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ತಾಲೂಕು ಘಟಕ ಹಾಗೂ ಹೊಸಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ವತಿಯಿಂದ ಬಿಇಒ ಶ್ರೀನಿವಾಸ ಜಿ. ಬನ್ನಿಗೋಳ ಅವರಿಗೆ ಮನವಿ ಸಲ್ಲಿಸಲಾಯಿತು.



ಕರವೇ ತಾಲೂಕು ಘಟಕದ ಅಧ್ಯಕ್ಷ ಶಿವಕುಮಾರ ನಾಗನಗೌಡ್ರ ಮಾತನಾಡಿ, ತಾಲೂಕಿನ ವಿವಿಧ ಸರ್ಕಾರಿ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಇತ್ತೀಚೆಗೆ ಶೂಗಳನ್ನು ವಿತರಿಸಲಾಗಿದೆ. ಆದರೆ, ವಿತರಿಸಿರುವ ಶೂಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು, ಕೆಲ ಶೂಗಳಲ್ಲಿ ಕಂಪನಿಯ ಹೆಸರಾಗಲಿ, ಅಗತ್ಯ ಮಾಹಿತಿಯಾಗಲಿ ಇಲ್ಲ. ಅಲ್ಲದೆ, ವಿದ್ಯಾರ್ಥಿಗಳ ಕಾಲಿಗೆ ಸರಿಹೊಂದುವ ಗಾತ್ರದ ಶೂಗಳು ದೊರೆಯದೆ, ಕೆಲವು ಚಿಕ್ಕದಾಗಿದ್ದರೆ ಇನ್ನೂ ಕೆಲವು ದೊಡ್ಡದಾಗಿವೆ ಎಂದು ದೂರಿದರು. ಕಳಪೆ ಗುಣಮಟ್ಟದಿಂದಾಗಿ ಕೆಲವೇ ದಿನಗಳಲ್ಲಿ ಶೂಗಳು ಹರಿದುಹೋಗುವ ಸ್ಥಿತಿಗೆ ತಲುಪಿದ್ದು, ವಿದ್ಯಾರ್ಥಿಗಳಿಗೆ ಶಾಲೆಗೆ ಶೂ ಧರಿಸಿ ಬರಲು ತೊಂದರೆಯಾಗುತ್ತಿದೆ. ಈ ಕುರಿತು ಹಲವು ಶಾಲೆಗಳಿಂದ ದೂರುಗಳು ಕೇಳಿಬರುತ್ತಿವೆ. ಆದ್ದರಿಂದ ಶಿಕ್ಷಣ ಇಲಾಖೆ ಅಧಿಕಾರಿಗಳು ವಿತರಿಸಿರುವ ಶೂಗಳ ಗುಣಮಟ್ಟ ಪರಿಶೀಲಿಸಿ, ವಿದ್ಯಾರ್ಥಿಗಳಿಗೆ ಸೂಕ್ತ ಗಾತ್ರದ ಹಾಗೂ ಉತ್ತಮ ಗುಣಮಟ್ಟದ ಶೂಗಳನ್ನು ಮರು ವಿತರಿಸಬೇಕು ಎಂದು ಆಗ್ರಹಿಸಿದರು. ಸಮಸ್ಯೆಯನ್ನು ಕೂಡಲೇ ಪರಿಹರಿಸದಿದ್ದರೆ ಪಾಲಕರು ಹಾಗೂ ಸಂಬಂಧಪಟ್ಟ ಶಾಲಾ ಎಸ್‌ಡಿಎಂಸಿ ಸದಸ್ಯರೊಂದಿಗೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿ ಘಟಕದ ಜಿಲ್ಲಾಧ್ಯಕ್ಷ ಭೀಮೇಶ ಬಂಡಿಬಡ್ಡರ್, ಎಸ್‌ಡಿಎಂಸಿ ಅಧ್ಯಕ್ಷ ಕಳಕನಗೌಡ ನಾಗನಗೌಡ್ರ, ಪ್ರಮುಖರಾದ ಪ್ರಕಾಶ, ಉಮೇಶ ಹರಿಜನ, ಸುರೇಶ ಹರಿಜನ, ಬಸವರಾಜ ಹರಿಜನ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಂಪ್ಲಿ ಕೋಟೆ ನಿವಾಸಿಗಳ ನರಕಯಾತನೆ: ಮೂಲಸೌಕರ್ಯ ಕೊರತೆ ಹಾಗೂ ಕೋತಿಗಳ ಹಿಂಡಿನ ದಾಳಿಗೆ ಸಾರ್ವಜನಿಕರು ಹೈರಾಣು!

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಐತಿಹಾಸಿಕ ಹಿನ್ನೆಲೆಯುಳ್ಳ ಕಂಪ್ಲಿ ಕೋಟೆಯ ವಾರ್ಡ್ ನಂಬರ್ 1 ಮತ್ತು 13ರ ನಿವಾಸಿಗಳು ತೀವ್ರ ಮೂಲಸೌಕರ್ಯ ಕೊರತೆಯಿಂದಾಗಿ ನರಕಯಾತನೆ ಅನುಭವಿಸುತ್ತಿದ್ದಾರೆ. ಸುಮಾರು 3,000 ದಿಂದ 4,000 ಜನಸಂಖ್ಯೆ ಹೊಂದಿರುವ ಈ ಭಾಗದಲ್ಲಿ ಸಮಸ್ಯೆಗಳ ಸರಮಾಲೆಯೇ ಸೃಷ್ಟಿಯಾಗಿದ್ದು, ಅದರಲ್ಲೂ ವಿಶೇಷವಾಗಿ ಕೋತಿಗಳ ಅತಿಯಾದ ಹಾವಳಿಯಿಂದಾಗಿ ಜನರು ಮನೆಯಿಂದ ಹೊರಬರಲು ಹೆದರುವ ವಾತಾವರಣ ನಿರ್ಮಾಣವಾಗಿದೆ. ಸ್ಥಳೀಯ ಆಡಳಿತದ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೋಟೆಯ ನಿವಾಸಿಗಳು ಎದುರಿಸುತ್ತಿರುವ ಪ್ರಮುಖ ದೂರುಗಳ ವರದಿ ಇಲ್ಲಿದೆ: ಮಿತಿಮೀರಿದ ಕೋತಿಗಳ ಕಾಟಆತಂಕದಲ್ಲಿ ನಿವಾಸಿಗಳು: ಕೋಟೆ ಪ್ರದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಕೋತಿಗಳ ಹಾವಳಿ ಮಿತಿಮೀರಿದೆ. ನೂರಾರು ಕೋತಿಗಳ ಹಿಂಡುಗಳು ರಸ್ತೆಗಳಲ್ಲಿ, ಮನೆಗಳ ಮೇಲ್ಛಾವಣಿಗಳ ಮೇಲೆ ಬೀಡುಬಿಟ್ಟಿವೆ. ಸಾರ್ವಜನಿಕರು ಕೈಯಲ್ಲಿ ತರಕಾರಿ, ಹಾಲು, ದಿನಸಿ ಚೀಲಗಳನ್ನು ಹಿಡಿದುಕೊಂಡು ಹೋಗದಂತಾಗಿದೆ. ಕಣ್ಣು ಮಿಟುಕಿಸುವುದರೊಳಗೆ ದಾಳಿ ನಡೆಸಿ ಚೀಲಗಳನ್ನು ಕಿತ್ತುಕೊಳ್ಳುತ್ತಿವೆ. ಅಷ್ಟೇ ಅಲ್ಲದೆ, ಮನೆಗಳ ಬಾಗಿಲು, ಕಿಟಕಿಗಳು ಸ್ವಲ್ಪ ತೆರೆದಿದ್ದರೂ ಸಾಕು, ಗುಂಪಾಗಿ ಒಳನುಗ್ಗಿ ಆಹಾರ ಧಾನ್ಯಗಳನ್ನು ಚೆಲ್ಲಾಪಿಲ್ಲಿ ಮಾಡುತ್ತಿವೆ ಮತ್ತು ಗೃಹೋಪಯೋಗಿ ವಸ್ತುಗಳನ್ನು ನಾಶಪಡಿಸುತ್ತಿವೆ.



ಕೋತಿಗಳ ಹೆದರಿಕೆಯಿಂದಾಗಿ ನಿವಾಸಿಗಳು ಹಗಲು ಹೊತ್ತಿನಲ್ಲೂ ಮನೆಗಳ ಬಾಗಿಲು ಹಾಕಿಕೊಂಡು ಬದುಕುವಂತಾಗಿದೆ. ಮಕ್ಕಳು, ವೃದ್ಧರು ಹಾಗೂ ಮಹಿಳೆಯರ ಮೇಲೆ ಕೋತಿಗಳು ದಾಳಿ ನಡೆಸಿ ಗಾಯಗೊಳಿಸಿರುವ ಹಲವು ಘಟನೆಗಳು ಜರುಗಿದ್ದು, ಕೋಟೆ ನಿವಾಸಿಗಳು ನಿತ್ಯ ಪ್ರಾಣಭಯದಲ್ಲೇ ಕಾಲ ಕಳೆಯುತ್ತಿದ್ದಾರೆ. ಈ ಬಗ್ಗೆ ಅರಣ್ಯ ಇಲಾಖೆ ಹಾಗೂ ಪುರಸಭೆ ಕೂಡಲೇ ಎಚ್ಚೆತ್ತುಕೊಂಡು, ಕೋತಿಗಳನ್ನು ಹಿಡಿದು ಕಾಡಿಗೆ ಬಿಡಲು ತಕ್ಷಣವೇ ಕಾರ್ಯಾಚರಣೆ ಆರಂಭಿಸಬೇಕೆಂದು ಸಾರ್ವಜನಿಕರು ಕಳಕಳಿಯಿಂದ ಒತ್ತಾಯಿಸಿದ್ದಾರೆ. ರಸ್ತೆ ಒತ್ತುವರಿ ಮತ್ತು ಸಂಚಾರ ದಟ್ಟಣೆ: ಕೋಟೆಯ ಮುಖ್ಯ ರಸ್ತೆಯನ್ನು ಸಾರ್ವಜನಿಕರು ಒತ್ತುವರಿ ಮಾಡಿಕೊಂಡಿರುವುದರಿಂದ ರಸ್ತೆ ಅತ್ಯಂತ ಕಿರಿದಾಗಿದೆ. ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುವ ಈ ಮಾರ್ಗದಲ್ಲಿ ಶಾಲೆಗೆ ಹೋಗುವ ಮಕ್ಕಳು, ವೃದ್ಧರು ಹಾಗೂ ದಿವ್ಯಾಂಗರು ಜೀವ ಕೈಯಲ್ಲಿ ಹಿಡಿದು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೈಪಾಸ್ ರಸ್ತೆಯಲ್ಲಿ ಸಂಚಾರ ವ್ಯತ್ಯಯವಾದಾಗ ಎಲ್ಲ ವಾಹನಗಳು ಕೋಟೆಯ ರಸ್ತೆಯ ಮೂಲಕವೇ ಹಾದುಹೋಗುವುದರಿಂದ ಇಲ್ಲಿನ ಟ್ರಾಫಿಕ್ ಸಮಸ್ಯೆ ಮತ್ತಷ್ಟು ಬಿಗಡಾಯಿಸುತ್ತಿದೆ.

ಬಸ್ ನಿಲ್ದಾಣದ ಕೊರತೆ: ಕೋಟೆಯಿಂದ ನಿತ್ಯ ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉನ್ನತ ಶಿಕ್ಷಣಕ್ಕಾಗಿ ಬಳ್ಳಾರಿ, ಗಂಗಾವತಿ, ಹೊಸಪೇಟೆಗೆ ಹಾಗೂ ಉದ್ಯೋಗಸ್ಥರು ಬೇರೆ ಬೇರೆ ಊರುಗಳಿಗೆ ಪ್ರಯಾಣಿಸುತ್ತಾರೆ. ಆದರೆ, ಇವರೆಲ್ಲರೂ ಬಸ್ಸಿಗಾಗಿ ಕಾಯಲು ಇಲ್ಲಿ ಯಾವುದೇ ಸೂಕ್ತ ಬಸ್ ನಿಲ್ದಾಣದ ವ್ಯವಸ್ಥೆ ಇಲ್ಲದೆ ಬಿಸಿಲು-ಮಳೆಯಲ್ಲಿ ರಸ್ತೆಯಲ್ಲೇ ನಿಲ್ಲಬೇಕಾಗಿದೆ. ಈ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ.. ರೂ. 48 ಲಕ್ಷದ ಪುಷ್ಕರ ಕಾಮಗಾರಿ ನಿರುಪಯುಕ್ತ: ಕಳೆದ ಎರಡು ವರ್ಷಗಳ ಹಿಂದೆ ತುಂಗಭದ್ರಾ ನದಿಯ ದಡದಲ್ಲಿ ಪುಷ್ಕರದ ಸಂದರ್ಭದಲ್ಲಿ ಸುಮಾರು 48 ಲಕ್ಷ ರೂಪಾಯಿ ವೆಚ್ಚದಲ್ಲಿ ಕೈಗೊಂಡಿದ್ದ ಕಾಮಗಾರಿ ಸ್ಥಳವು ಸಾರ್ವಜನಿಕರಿಗೆ ಯಾವುದೇ ಬಳಕೆಗೆ ಬಾರದೆ ನಿರುಪಯುಕ್ತವಾಗಿದೆ. ಸಂಬಂಧಪಟ್ಟ ಇಲಾಖೆಯು ಈ ಸ್ಥಳಕ್ಕೆ ಸೂಕ್ತ ರಕ್ಷಣಾ ಕವಚ (ಬೇಲಿ ಅಥವಾ ತಡೆಗೋಡೆ) ನಿರ್ಮಿಸಿ, ಇದನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡಬೇಕಿದೆ.

ಬೀದಿ ದೀಪಗಳಿಲ್ಲದ ಕತ್ತಲ ಹಾದಿ: ಕೋಟೆಯ 3 ಪ್ರಮುಖ ರಸ್ತೆಗಳಲ್ಲಿ ಸಮರ್ಪಕವಾಗಿ ಬೀದಿ ದೀಪಗಳನ್ನು ಅಳವಡಿಸಿಲ್ಲ. ಇದರಿಂದಾಗಿ ರಾತ್ರಿ ವೇಳೆಯಲ್ಲಿ ಪಾದಚಾರಿಗಳು, ಮಹಿಳೆಯರು ಮತ್ತು ಮಕ್ಕಳು ಕತ್ತಲಲ್ಲೇ ಓಡಾಡಬೇಕಾಗಿದ್ದು, ಕಳ್ಳರ ಹಾಗೂ ಪ್ರಾಣಿಗಳ ಭಯ ಎದುರಾಗಿದೆ.

ಹಂದಿಗಳ ಕಾಟ ಮತ್ತು ಸಾಂಕ್ರಾಮಿಕ ರೋಗದ ಭೀತಿ: ರಸ್ತೆಗಳಲ್ಲಿ ಹಂದಿಗಳು ರಾಜಾರೋಷವಾಗಿ ತಿರುಗಾಡುತ್ತಿದ್ದು, ಗಲೀಜು ಮಾಡುತ್ತಿವೆ. ಇದರಿಂದಾಗಿ ಇಡೀ ಪ್ರದೇಶದಲ್ಲಿ ದುರ್ವಾಸನೆ ಹರಡಿದ್ದು, ಡೆಂಗ್ಯೂ, ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಬೀದಿ ನಾಯಿಗಳ ಹಾವಳಿ: ಇತ್ತೀಚಿನ ದಿನಗಳಲ್ಲಿ ಕೋಟೆ ಪ್ರದೇಶದಲ್ಲಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗಿದ್ದು, ಒಂಟಿಯಾಗಿ ಓಡಾಡುವ ಸಾರ್ವಜನಿಕರನ್ನು ಹಾಗೂ ಸಣ್ಣ ಮಕ್ಕಳನ್ನು ಕಚ್ಚಲು ಬೆನ್ನಟ್ಟುತ್ತಿವೆ.ಕಂಪ್ಲಿ ಕೋಟೆಯ ಸಮಸ್ತ ನಾಗರಿಕರ ಪರವಾಗಿ ಸ್ಥಳೀಯ ಆಡಳಿತ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಈ ಪ್ರಮುಖ ಬೇಡಿಕೆಗಳಿಗೆ, ವಿಶೇಷವಾಗಿ ಕೋತಿಗಳ ಹಾವಳಿಗೆ ತಕ್ಷಣವೇ ಸ್ಪಂದಿಸಿ, ಶಾಶ್ವತ ಪರಿಹಾರ ಒದಗಿಸಬೇಕೆಂದು ಕಳಕಳಿಯ ವಿನಂತಿ ಮಾಡಲಾಗಿದೆ. ನಿರ್ಲಕ್ಷ್ಯ ಮುಂದುವರಿದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿಇಲ್ಲಿನ ನಿವಾಸಿಗಳು ಎಚ್ಚರಿಸಿದ್ದಾರೆ.

ಲಿಂಗಸುಗೂರಿನ ರಡ್ಡರ ಸೌಹಾರ್ದ ಸಹಕಾರ ಸಂಘ ನಿಯಮಿತದಿಂದ ಕಾರುಣ್ಯಾಶ್ರಮಕ್ಕೆ ಐವತ್ತು ಸಾವಿರ ಧನ ಸಹಾಯ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಮಸ್ಕಿ ತಾಲೂಕಿನ ಮುಸಲಿ ಕಾರಲಿಕುಂಟಿ ಗ್ರಾಮದಲ್ಲಿ ಪರಮಪೂಜ್ಯ ಪರಮ ತಪಸ್ವಿ ಮೌನ ಯೋಗಿಗಳಾಗಿದ್ದ ಶ್ರೀ ಮರಿ ಬಸವಲಿಂಗ ದೇಶ ಕೇಂದ್ರ ಮಹಾಶಿವಯೋಗಿಗಳು ಸ್ಥಾಪಿಸಿದ ಕಟ್ಟೆಯ ಶಾಖಾ ಮಠದ 39ನೇ ವರ್ಷದ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವ ಪಲ್ಲಕ್ಕಿ ಉತ್ಸವ 102ನೇ ತುಲಾಭಾರ ಸೇವೆ ಮತ್ತು ಜೀವನ ದರ್ಶನ ಆಧ್ಯಾತ್ಮ ಪ್ರವಚನದ 4ನೇ ದಿನದ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರುಗಳಾಗಿ

ಭಾಗವಹಿಸಿದ್ದ ಸಿಂಧನೂರಿನ ಕಾರುಣ್ಯ ಆಶ್ರಮದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಮತ್ತು ಡಾ. ಚನ್ನಬಸವ ಸ್ವಾಮಿ ಹಿರೇಮಠ ಇವರುಗಳ ಹಾಗೂ ಕರುನಾಡಿನ ಕರುಣಾಮಯಿ ಕುಟುಂಬ ಎಂದೇ ಖ್ಯಾತಿಯಾದ ಕಾರುಣ್ಯ ಆಶ್ರಮದ ಅಭೂತ ಪೂರ್ವ ಸೇವೆಯನ್ನು ಗುರುತಿಸಿ ಲಿಂಗಸುಗೂರಿನ ರಡ್ಡೇರ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಅಧ್ಯಕ್ಷರಾದ ಎಚ್. ಕುಮಾರಪ್ಪ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಗೌಡ. ಹಾಗೂ ನಿರ್ದೇಶಕರಾದ ಅಮರಣ್ಣ ಜೀರಾಳ ಇವರುಗಳು ಜಾತ್ರಾ ಮಹೋತ್ಸವದ ವೇದಿಕೆಯಲ್ಲಿ ಸಮಸ್ತ ಸದ್ಭಕ್ತರ ಸಮಕ್ಷಮದಲ್ಲಿ ಆಶ್ರಮದ ಪದಾಧಿಕಾರಿಗಳಾದ ಇಬ್ಬರು ಸೇವಾಕರಿಗೆ ಗೌರವಿಸಿ ಆಶ್ರಮದ ನಿರ್ವಹಣೆಗಾಗಿ



ಐವತ್ತು ಸಾವಿರ ರೂಪಾಯಿಗಳ ಚೆಕ್ ವಿತರಿಸುವ ಮೂಲಕ ಅಂಧ-ಅನಾಥರ ಬಾಳಿಗೆ ಬೆಳಕಾದರು.

ಈ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಸಿಂಧನೂರಿನ ಕಾರುಣ್ಯ ಆಶ್ರಮದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ವಿಶ್ವ ದರ್ಶನ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಮಾನವನ ಸಾರ್ಥಕತೆಯ ಸಂದೇಶಗಳನ್ನು ನಾವೆಲ್ಲರೂ ಕೂಡ ಮೈಗೂಡಿಸಿಕೊಂಡು ಮೌನ ಯೋಗಿಯಾಗಿದ್ದ ಬುದ್ಧಿಮಾಂದ್ಯನಂತೆ ನಮ್ಮೆಲ್ಲರನ್ನು ಆಶೀರ್ವದಿಸುತ್ತಿದ್ದ ಮೌನ ಯೋಗಿ ಶ್ರೀ ಮರಿಬಸವ ಲಿಂಗಸ್ವಾಮಿಗಳು ನಿರಂತರ ವರ್ಷಗಳ ಕಾಲ ಪ್ರತಿದಿನವೂ ಜಾತ್ರಾ ಮಹೋತ್ಸವ ಆಚರಿಸಿಕೊಳ್ಳುವಂತ ಒಬ್ಬ ಮಹಾನ್ ಶರಣರಾಗಿದ್ದಾರೆ.

ಇಂತಹ ಶರಣರ ಜಾತ್ರಾ ಮಹೋತ್ಸವದಲ್ಲಿ ಲಿಂಗಸುಗೂರಿನ ರಡ್ಡೇರ ಸೌಹಾರ್ದ ಸಹಕಾರ ಸಂಘ ನಿಯಮಿತದ ಅಧ್ಯಕ್ಷರು ಹಾಗೂ ಸರ್ವ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಅಂಧ-ಅನಾಥರ ಹಸಿವು ನೀಗಿಸುವ ಮೂಲಕ ಉಟಕನೂರು ಶ್ರೀಗಳ ಶುಭಾಶೀರ್ವಾದಕ್ಕೆ ಪಾತ್ರರಾಗಿದ್ದಾರೆ. ಮತ್ತು ಈ ನಮ್ಮ ಮುಸ್ಲಿ ಕಾರಲಿಕುಂಟಿ ಗ್ರಾಮದ ನಾನು ಕಂಡಂತಹ ಮಹಾನ್ ದಾಸೋಹಿಗಳಾದ ಅಮರೇಗೌಡರನ್ನು ನಾನು ಬಾಲ್ಯದಿಂದಲೂ ಸಹ ಒಳಬಳ್ಳಾರಿಯ ಮಠದಲ್ಲಿನವರ ಸೇವೆಯನ್ನೂ ಕೂಡ ಕಂಡಿದ್ದೇನೆ. ಮತ್ತು ಈ ಗ್ರಾಮದ ಸರ್ವರೂ ಕೂಡ ಧಾರ್ಮಿಕ ಕಾರ್ಯ ಕ್ರಮಗಳನ್ನು ಬಹಳ ಅರ್ಥಪೂರ್ಣವಾಗಿ ನೆರವೇರಿಸುತ್ತಾ ಬರುತ್ತಿದ್ದೀರಿ.

ನಿಮ್ಮ ಈ ಸೇವೆ ಶ್ರೀ ಮರಿಬಸವಲಿಂಗ ತಾತನವರಿಗೆ ಹಾಗೂ ನಾಡಿನ ಬಸವಾದಿ ಶರಣರಿಗೆ ಹರ ಗುರು ಚರಮೂರ್ತಿಗಳ ಪ್ರೀತಿಗೆ ಪಾತ್ರವಾಗಿದೆ. ನಿಮ್ಮೆಲ್ಲರ ಈ ಭಕ್ತಿಯೂ ನಿಮ್ಮ ಊರಿಗೆ ಯಾವುದೇ ಕೊರತೆ ಇರಲಾರದೆ ನಿಮ್ಮ ಬದುಕು ಉತ್ತಮವಾಗಲಿ ಎನ್ನುವುದು ಸಿಂಧನೂರಿನ ಕರುಣೆಯ ಕಾರುಣ್ಯ ಕುಟುಂಬದ ವಿಶೇಷ ಪ್ರಾರ್ಥನೆ. ಸರ್ಕಾರವು ಬರಿ ಹೊರಗಿನ ಕಸ ಹೊಡೆದರೆ ನಾಡಿನ ಮಹಾ ತಪಸ್ವಿಗಳು ಮತ್ತು ಎಲ್ಲಾ ಶರಣರು ಪುರಾಣ ಪ್ರವಚನಗಳ ಮೂಲಕ ನಮ್ಮಲ್ಲಿರುವ ಒಳಗಿನ ಕಸವನ್ನು ತೆಗೆದುಹಾಕಿ ಮಾನವ ಜೀವನವನ್ನು ಸಾರ್ಥಕ ಗೊಳಿಸುತ್ತಿದ್ದಾರೆ. ಇಂದಿನ ಈ ಕಾರ್ಯಕ್ರಮದಲ್ಲ ಭಾಗವಹಿಸಿರುವ ಎಲ್ಲಾ ಸದ್ಭಕ್ತರಿಗೆ ಮತ್ತು ಕಾರುಣ್ಯ ಆಶ್ರಮಕ್ಕೆ ಸಹಾಯ ಸಹಕಾರ ಮಾಡಿದ ಲಿಂಗಸುಗೂರಿನ ರೆಡ್ಡೇರ ಬ್ಯಾಂಕಿನ ಎಲ್ಲಾ ಸಮಸ್ತ ಪದಾಧಿಕಾರಿಗಳಿಗೆ ಅಧಿಕಾರಿಗಳಿಗೆ ಮತ್ತು ಗ್ರಾಹಕರುಗಳಿಗೆ ಸಿಂಧನೂರಿನ ಕರುಣೆಯ ಕಾರುಣ್ಯ ಕುಟುಂಬದ ವತಿಯಿಂದ ಅನಂತ ಕೋಟಿ ಕೋಟಿ ಪ್ರಣಾಮಗಳು ಎಂದು ಮಾತನಾಡಿ ಈ ಕಾರ್ಯಕ್ರಮದಲ್ಲಿ ಸಂಸ್ಕಾರ ಸಂಸ್ಕೃತಿಯ ಬಗ್ಗೆ ಹಲವಾರು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಈ ಕಾರ್ಯಕ್ರಮವನ್ನು ಬಸವಲಿಂಗಪ್ಪ ಮಲಕನೂರು ನಿರೂಪಣೆ ಮಾಡಿದರು. ಜೀವನ ದರ್ಶನದ ಆಧ್ಯಾತ್ಮ ಪ್ರವಚನಕಾರರಾಗಿ ಪಂಚಾಕ್ಷರಿ ಶಾಸ್ತ್ರಿಗಳು ಹಿರೇಮಠ ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ. ಸಂಗೀತ ಸೇವೆಯನ್ನು ಮನೋಹರ ಪಿ ಹಿರೇಮಠ ಗವಾಯಿಗಳು ತಲೆಕಟ್ಟು (ಅಂಕಲಿಮಠ) ತಬಲವಾದನ ಸೇವೆಯನ್ನು ಆರ್.ಪಿ.ಮಲ್ಲಿನಾಥ ಸ್ವಾಮಿ ಜಾನೇಕಲ್ ಇವರುಗಳು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್. ಆಶ್ರಮದ ಸಲಹಾ ಸಮಿತಿಯ ಹಿರಿಯರುಗಳಾದ ಪಂಪನಗೌಡ ಭೀಮನಗೌಡ್ರು ಹರೇಟನೂರು. ವೀರಭದ್ರಗೌಡ ಗಿಣಿವಾರ. ಬೀರಣ್ಣ ಯಲಗಲದಿನ್ನಿ.

ಶರಣಪ್ಪ ಕಸಬಾ ಲಿಂಗಸೂಗೂರು. ವೀರೇಶ ಸ್ಟುಡಿಯೋ ಲಿಂಗಸೂಗೂರು. ಹಾಗೂ ಮುಸ್ಲಿ ಕಾರಲಕುಂಟಿಯ ಹಿರಿಯರಾದ ಅಮರೇಗೌಡ್ರು ಬಸವರಾಜ ಮಲ್ಲಟ ಶರಣಪ್ಪ ಎನ್ ಹೋಳಿಯಾಚಿ. ನಾಗರಾಜ ಹೂವಿನಭಾವಿ. ಬಸವರಾಜ ಹೂವಿನಬಾವಿ. ವಿರುಪಣ್ಣ ವಟಗಲ್.ಮತ್ತು ಮುಸ್ಲಿ ಕಾರಲಕುಂಟಿಯ ಶ್ರೀ ಮರಿ ಬಸವಲಿಂಗೇಶ್ವರ ದೇವಸ್ಥಾನ ಸಮಿತಿಯ ಸರ್ವ ಪದಾಧಿಕಾರಿಗಳು ಹಾಗೂ ಸರ್ವಭಕ್ತರು ಮತ್ತು ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರುಗಳು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

NIMHANS ನೇಮಕಾತಿ 2026 – 1 ಮನಶ್ಶಾಸ್ತ್ರಜ್ಞ (Psychologist) ಹುದ್ದೆಗೆ ನೇರ ಸಂದರ್ಶನ ಸೆಪ್ಟೆಂಬರ್ 25, 2026

NIMHANS ನೇಮಕಾತಿ 2026: 01 ಮನಶ್ಶಾಸ್ತ್ರಜ್ಞ ಹುದ್ದೆಗೆ ಅರ್ಜಿ ಸಲ್ಲಿಸಿ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋ ಸೈನ್ಸಸ್ (NIMHANS) ತನ್ನ ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಮನಶ್ಶಾಸ್ತ್ರಜ್ಞ ಹುದ್ದೆಯನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕದ ಕೋಲಾರದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05–ಅಕ್ಟೋಬರ್–2026 ರಂದು ನಡೆಯುವ ನೇರ ಸಂದರ್ಶನದಲ್ಲಿ (Walk-in-interview) ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: nimhans.ac.in

ಶಿವಪ್ಪ ಪಲಕನಮರಡಿ ರಾಜ್ಯ ಸಂಘಟನಾ ಸಂಚಾಲಕರಾಗಿ ನೇಮಕ

❏ ನೈಜ್ಯ ದೇಸೆ ನ್ಯೂಸ್

ಅರಕೇರಾ: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ರಾಜ್ಯ ಸಂಘಟನಾ ಸಂಚಾಲಕರಾಗಿ ದೇವದುರ್ಗ ತಾಲ್ಲೂಕಿನ ಪಲಕನಮರಡಿ ಗ್ರಾಮದ ಶಿವಪ್ಪ ಅವರನ್ನು ಅವಿರೋಧವಾಗಿ ನೇಮಕ ಮಾಡಲಾಗಿದೆ.



ಚಿತ್ರದುರ್ಗದಲ್ಲಿ ಸೆ.23ರಂದು ನಡೆದ ರಾಜ್ಯ ಸಮಿತಿ ಸಭೆಯಲ್ಲಿ ಶಿವಪ್ಪ ಅವರನ್ನು ರಾಜ್ಯ ಸಂಘಟನಾ ಸಂಚಾಲಕರಾಗಿ ಆಯ್ಕೆ ಮಾಡಲಾಯಿತು. ಸಂಘಟನೆಯ ತತ್ವ, ಸಿದ್ಧಾಂತ ಹಾಗೂ ಸಾಮಾಜಿಕ ನ್ಯಾಯದ ಆಶಯಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಸಂಘಟನಾ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವಂತೆ ರಾಜ್ಯ ಸಮಿತಿ ಸೂಚಿಸಿದೆ. ಈ ಕುರಿತು ನೈಜ ದೇಸೆ ಕನ್ನಡ ದಿನಪತ್ರಿಕೆಯೊಂದಿಗೆ ಮಾತನಾಡಿದ ಶಿವಪ್ಪ ಅವರು, ಸಂಘಟನೆಯ ತತ್ವ, ಸಿದ್ಧಾಂತ ಹಾಗೂ ಸಾಮಾಜಿಕ ನ್ಯಾಯದ ಆಶಯಗಳನ್ನು ಬಲಪಡಿಸುವ ನಿಟ್ಟಿನಲ್ಲಿ ತಮಗೆ ವಹಿಸಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದಾಗಿ ತಿಳಿಸಿದರು. ಅಲ್ಲದೆ, ಬಡವರು, ದೀನದಲಿತರು ಹಾಗೂ ಶೋಷಿತ ವರ್ಗಗಳ ಪರವಾಗಿ ಹಗಲಿರುಳು ಶ್ರಮಿಸುವುದಾಗಿ ಅವರು ಹೇಳಿದರು.

ಕುಷ್ಟಗಿ ಯುವ ನಿರ್ದೇಶಕ ಡಿ. ಮಹಾಂತೇಶ ಹಂದ್ರಾಳ ಅವರ 'ಸ್ಪಾರ್ಕ್' ಚಿತ್ರ ಬಿಡುಗಡೆ

❏ ನೈಜ್ಯ ದೇಸೆ ನ್ಯೂಸ್

ಕುಷ್ಟಗಿ: ತಾಲೂಕಿನ ತೊನಸಿಹಾಳ ಗ್ರಾಮದ ಯುವ ಪ್ರತಿಭೆ ಡಿ. ಮಹಾಂತೇಶ ಹಂದ್ರಾಳ ಅವರು ಸ್ವತಂತ್ರ ನಿರ್ದೇಶಕರಾಗಿ ನಿರ್ದೇಶಿಸಿರುವ 'ಸ್ಪಾರ್ಕ್' ಕನ್ನಡ ಚಲನಚಿತ್ರ ಇಂದು ನಾಡಿನಾದ್ಯಂತ ಬಿಡುಗಡೆಯಾಗಿದೆ.



ಕಳೆದ ಒಂದೂವರೆ ದಶಕದಿಂದ ಕನ್ನಡ ಚಿತ್ರರಂಗದಲ್ಲಿ ಅಸಿಸ್ಟೆಂಟ್ ಡೈರೆಕ್ಟರ್, ಅಸೋಸಿಯೇಟ್ ಡೈರೆಕ್ಟರ್ ಹಾಗೂ ಕೋ–ಡೈರೆಕ್ಟರ್ ಆಗಿ ಕಾರ್ಯನಿರ್ವಹಿಸಿರುವ ಮಹಾಂತೇಶ ಹಂದ್ರಾಳ ಅವರು ಕನ್ನಡದ ಹಲವು ಪ್ರತಿಭಾವಂತ ನಿರ್ದೇಶಕರೊಂದಿಗೆ ಕೆಲಸ ಮಾಡಿ ಅಪಾರ ಅನುಭವ ಗಳಿಸಿದ್ದಾರೆ. ಪುನೀತ್ ರಾಜ–ಕುಮಾರ್, ಶ್ರೀಮುರಳಿ, ದುನಿಯಾ ವಿಜಯ್ ಸೇರಿದಂತೆ ಹಲವು ಪ್ರಮುಖ ಕಲಾವಿದರ ಚಿತ್ರಗಳಲ್ಲಿಯೂ ಅವರು ಕಾರ್ಯನಿರ್ವಹಿಸಿದ್ದಾರೆ. ಇದೀಗ ತಮ್ಮ ಸ್ವತಂತ್ರ ನಿರ್ದೇಶನದ 'ಸ್ಪಾರ್ಕ್' ಚಿತ್ರದ ಮೂಲಕ ಬೆಳ್ಳಿತೆರೆಗೆ ಪರಿಚಿತರಾಗುತ್ತಿದ್ದಾರೆ. ಚಿತ್ರದ ನಾಯಕ ನಟ–ರಾಗಿ ನಿರಂಜನ್ ಅಭಿನಯಿಸಿದ್ದು, ಲವ್ಲಿ ಸ್ಟಾರ್ ಪ್ರೇಮ್ ಸೇ–ರಿದಂತೆ ಹೆಸರಾಂತ ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಕುಷ್ಟಗಿ ನಗರದ ಮಾರುತಿ ಚಿತ್ರಮಂದಿರದಲ್ಲಿಯೂ 'ಸ್ಪಾರ್ಕ್' ಚಿತ್ರ ಪ್ರದರ್ಶನಗೊಳ್ಳುತ್ತಿದೆ. ತಾಲೂಕಿನ ಕಲಾ ಪ್ರೇಮಿಗಳು ಹಾಗೂ ಚಲನಚಿತ್ರ ಅಭಿಮಾನಿಗಳು ಚಿತ್ರವನ್ನು ವೀಕ್ಷಿಸಿ ಸ್ಥಳೀಯ ಪ್ರತಿಭೆಗೆ ಪ್ರೋತ್ಸಾಹ ನೀಡುವಂತೆ ಅಭಿಮಾನಿ ಬಳಗ ಮನವಿ ಮಾಡಿದೆ. 'ಸ್ಪಾರ್ಕ್' ಚಿತ್ರ ಯಶಸ್ವಿಯಾಗಿ ಪ್ರದರ್ಶನಗೊಳ್ಳಲಿ ಹಾಗೂ ನಿರ್ದೇಶಕ ಡಿ. ಮಹಾಂತೇಶ ಹಂದ್ರಾಳ ಅವರ ಕಲಾ ಸೇವೆ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸುತ್ತೇವೆ. ಡಿ. ಮಹಾಂತೇಶ ಹಂದ್ರಾಳ ಅಭಿಮಾನಿ ಬಳಗ ಕುಷ್ಟಗಿ, ಕೊಪ್ಪಳ ಜಿಲ್ಲೆ ಊರಿನ ಗ್ರಾಮಸ್ಥರು ಶುಭ ಹಾರೈಸಿದರು

ಪೌರಕಾರ್ಮಿಕರ ಆರೋಗ್ಯ ಕಾಪಾಡುವುದು ಪಾಲಿಕೆಯ ಜವಾಬ್ದಾರಿ: ಮುರಳೀಧರ

❏ ನೈಜ್ಯ ದೇಸೆ ನ್ಯೂಸ್

ರಾಯಚೂರು: ಪೌರಕಾರ್ಮಿಕರ ದಿನಾಚರಣೆ ನಿಮಿತ್ತ ನಗರದ ಸ್ವಚ್ಛತೆ ಹಾಗೂ ಶುಚಿತ್ವ ಕಾಪಾಡುವಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ ಪೌರಕಾರ್ಮಿಕರು ಮತ್ತು ಸ್ವಚ್ಛತಾ ಸಿಬ್ಬಂದಿಗಾಗಿ ರಾಯಚೂರು ಮಹಾನಗರ ಪಾಲಿಕೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು.

ಶಿಬಿರದಲ್ಲಿ ರಕ್ತದೊತ್ತಡ, ಮಧುಮೇಹ, ರಕ್ತ ಪರೀಕ್ಷೆ, ಲ್ಯಾಪ್ರೋಸ್ಕೋಪಿ, ಕಣ್ಣಿನ ತಪಾಸಣೆ ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳನ್ನು ಉಚಿತವಾಗಿ ನಡೆಸಲಾಯಿತು. ಆರೋಗ್ಯ ಸಮಸ್ಯೆ ಕಂಡುಬಂದ ಸಿಬ್ಬಂದಿಗೆ ಅಗತ್ಯ ಔಷಧಿಗಳನ್ನು ಉಚಿತವಾಗಿ ವಿತ–ರಿಸುವುದರ ಜೊತೆಗೆ ಮುಂದಿನ ಚಿಕಿತ್ಸೆಗೆ ವೈದ್ಯರಿಂದ ಸೂಕ್ತ ಸಲಹೆ ನೀಡಲಾಯಿತು. ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಸಿಬ್ಬಂದಿ ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ, ವಿಶೇಷ ದಿನಾಚರಣೆಗಳಿಗೆ ಮಾತ್ರ ಸೀಮಿತವಾಗದೆ ಪ್ರತಿ ತಿಂಗಳು ಕಾರ್ಮಿಕರ



ಆರೋಗ್ಯ ಮತ್ತು ಹಿತ ರಕ್ಷಣೆಗೆ ವಿವಿಧ ಕಾರ್ಯಕ್ರಮಗಳು ಹಾಗೂ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪಾಲಿಕೆ ಉಪ ಆಯುಕ್ತರಾದ ಶ್ರೀ ಮುರಳೀಧರ, "ನಗರವನ್ನು ಸ್ವಚ್ಛವಾಗಿಡಲು ಪೌರಕಾರ್ಮಿಕರು ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಆರೋಗ್ಯವನ್ನು ಕಾಪಾಡುವುದು ನಮ್ಮ ಜವಾಬ್ದಾರಿಯಾಗಿದೆ. ಪೌರಕಾರ್ಮಿಕರ ಅಮೂಲ್ಯ ಸೇವೆಗೆ ಪ್ರತಿಯೊಬ್ಬ ನಾಗ–ರಿಕರೂ ಚಿರಋಣಿಯಾಗಿರಬೇಕು" ಎಂದರು.

ವಲಯ ಆಯುಕ್ತರಾದ ಶ್ರೀ ಮಲ್ಲಿಕಾರ್ಜುನ ಬಿ.ಎಂ. ಮಾತನಾಡಿ, "ಸಮಾಜವನ್ನು ಸ್ವಚ್ಛವಾಗಿಡಲು ನಿರಂತರವಾಗಿ ಶ್ರಮಿಸುತ್ತಿರುವ ಪೌರಕಾರ್ಮಿಕರ ಸೇವೆಯನ್ನು ಗೌರವಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತಿದೆ. ಅವರ ಸೇವೆಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಅಭಿನಂದನೆಗಳು ದೊರೆತಿವೆ. ಪೌರಕಾರ್ಮಿಕರ ಸೇವೆಯನ್ನು ಶ್ಲಾಘಿಸುವ ಸಲುವಾಗಿ ಸರ್ಕಾರ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅದರಲ್ಲಿ ಭಾಗವಹಿಸಲು ಪಾಲಿಕೆ ವತಿಯಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಪರಿಸರ ಅಭಿಯಂತರ ಶ್ರೀ ಜೈಪಾಲ್ ರೆಡ್ಡಿ, ಸಮುದಾಯ ಸಂಘಟನಾಧಿಕಾರಿ ಕೃಷ್ಣ ಕಟ್ಟಿಮನಿ, ತಾಲೂಕು ವೈದ್ಯಾಧಿಕಾ–ರಿಗಳು, ವಾರ್ಡ್‌ಗಳ ಆರೋಗ್ಯ ನಿರೀಕ್ಷಕರು ಹಾಗೂ ಪಾಲಿಕೆ ಸಿಬ್ಬಂದಿ ಉಪಸ್ಥಿತರಿದ್ದರು.

ಬಾಲಯ್ಯ ಕ್ಯಾಂಪಿನ ಶ್ರೀರಾಮದೇವ ಮಹಿಳಾ ಮಂಡಳಿಯಿಂದ ಕಾರುಣ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವಾ ಕಾರ್ಯಕ್ರಮ

❏ ನೈಜ್ಯ ದೇಸೆ ನ್ಯೂಸ್

ಸಿಂಧನೂರು – ತಾಲೂಕಿನ ಬಾಲಯ್ಯ ಕ್ಯಾಂಪಿನ ಶ್ರೀರಾಮದೇವ ಮಹಿಳಾ ಮಂಡಳಿಯ ಸುಮಾರು ಮೂವತ್ತಕ್ಕೂ ಹೆಚ್ಚು ತಾಯಂದಿರು ತಾವೇ ತಮ್ಮಿಂದ ವಿವಿಧ ಬಗೆಯ ಮಹಾಪ್ರಸಾದವನ್ನು ತಯಾರಿಸಿ ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿನ ಆಶ್ರಯದಾತರುಗಳಿಗೆ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತ–ರಿಸುವ ಮೂಲಕ " ನೊಂದ ಜೀವಿಗಳ ನಾಡಿಮಿಡಿತ " ಎನ್ನುವ ವಿಶೇಷ ಕಾರ್ಯಕ್ರಮವನ್ನು ಅರ್ಥ–ಪೂರ್ಣವಾಗಿ ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಮಹಿಳಾ ಮಂಡಳಿಯ ಹಲವಾರು ತಾಯಂದಿರು ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ನಂತರ ಆಶ್ರಮದ ಕಾರ್ಯ ಅಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಇಂದು ಕಾರುಣ್ಯ ಕುಟುಂಬವನ್ನು ಒಟ್ಟಾಗಿ ತಾವೆಲ್ಲರೂ ಆಶ್ರಮಕ್ಕೆ ತಾವೇ ಅಡುಗೆಯನ್ನು ತಯಾರಿಸಿ ಮಾಡುತ್ತಿರುವ ಈ ಕಾರ್ಯ ಸರ್ವಾನುದೇವತೆಗಳಿಗೆ ಮೆಚ್ಚುಗೆಯಾಗಿರುವಂತಹ ವಿಶೇಷ ಕಾರ್ಯ ತಾವು ಗಳೆಲ್ಲರೂ ಒಗ್ಗಟ್ಟಾಗಿ ಕಾರುಣ್ಯ ಆಶ್ರಮದ ಆಶ್ರಯದಾತರುಗಳು ನಮ್ಮ ತಂದೆ ತಾಯಿಗಳ ಸಮಾನರು ಮತ್ತು ಇಲ್ಲಿರುವಂಥ ಎಲ್ಲ ವಯಸ್ಕರ ಬುದ್ಧಿಮಾಂದ್ಯರೂ ಕೂಡ ನಮ್ಮ ಕುಟುಂಬದ ಮಕ್ಕಳು ಇದ್ದಹಾಗೆ ಎನ್ನುವ ಹಲವಾರು ಹಂಚಿಕೆಗಳನ್ನು ವ್ಯಕ್ತಪಡಿಸುವ ಮೂಲಕ ಸೇವೆಗೆ ಇನ್ನು ಹೆಚ್ಚು ಶಕ್ತಿ ತುಂಬಿದ್ದೀರಿ. ಇಂದಿನ ಈ ಸೇವೆ ಮಾಡಿರುವ ಎಲ್ಲಾ ತಾಯಂದಿರು ಕೂಡ ಸಮಾಜದಲ್ಲಿ ಹೆತ್ತವರನ್ನು ಅತ್ತೆ ಮಾವಂದಿರನ್ನು ಹೊರ ಹಾಕುವಂತ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಬುದ್ಧಿವಾದ ಹೇಳುವುದರ ಮೂಲಕ ಸಮಾಜವನ್ನು ಇಂತಹ ವೃದ್ಧಾಶ್ರಮಗಳಿಂದ ಮುಕ್ತಿ ಕೊಡಿಸಿ ಎನ್ನುವುದು ಕಾರುಣ್ಯ ಕುಟುಂಬದ ಅಂತರಾಳದ ಅನಿಸಿಕೆಯಾಗಿದೆ ಎಂದು ಮಾತನಾಡಿ ಎಲ್ಲಾ ತಾಯಂದಿರಿಗೆ ಕಾರುಣ್ಯ ಕುಟುಂಬದ ವತಿಯಿಂದ ಧನ್ಯವಾದಗಳನ್ನು ತಿಳಿಸಿದರು.

ಈ ಸಮಯದಲ್ಲಿ ನಾಗಶ್ರೀ ವಲ್ಲಿ ಗಂ.ನಾಗಶಿವದತ್ತ ಅರ್ಚಕರು ಶ್ರೀರಾಮದೇವ ದೇವಸ್ಥಾನ ಬಾಲಯ್ಯ ಕ್ಯಾಂಪ್. ಶ್ರೀ ದತ್ತ ಸಾಯಿ.ಶೀ–ರಿಷಾ ನೆಕ್ಕಂಟಿ. ಪ್ರಶಾಂತಿ ಗಂ. ಮಂಜುನಾಥ.



ಬುಲ್ಲಪಲ್ಲಿ ನಾಗಮಣಿ ಗಂ. ಸುಬ್ಬಾರಾವ್. ನೆಕ್ಕಂಟಿ ವರಲಕ್ಷ್ಮಿ ಗಂ. ಲಕ್ಷ್ಮಣಾರಾಯಣ. ನೆಕ್ಕಂಟಿ ರಾಜೇಶ್ವರಿ ಗಂ. ಸತ್ಯನಾರಾಯಣ. ತಮ್ಮಿನಿಡ ಪೂರ್ಣಿಮಾ ಗಂಡ ಪ್ರಸಾದ. ಮೇಕಾ ರಾಜಲಕ್ಷ್ಮಿ ಗಂ ಶ್ರೀನಿವಾಸ. ಮಂಗಾರತ್ನ ಗಂ. ಪದ್ದರಾಜು. ಯು ಜಗದಂಬಾ ಗಂ. ರಾಮಕೃಷ್ಣ. ಪೊಳ್ಳ ಜ್ಯೋತಿ ಗಂ. ರಮೇಶ. ಹರಿತಾ ಗಂ.ಶ್ರೀರಾಮ್ ಬಾಬು. ಬಿ ಲಕ್ಷ್ಮಿ ಗಂ.ಸತ್ಯನಾರಾಯಣ. ಪ್ರಮೀಳಾ ಗಂ.ವೆಂಕಟನಾರಾಯಣ. ಗೊಡವರ್ತಿ ಶ್ರೀದೇವಿ ಗಂ. ಸೂರ್ಯನಾರಾಯಣ. ಪಿ ಲಕ್ಷ್ಮಿ ಗಂ.ಸತ್ಯನಾರಾಯಣ. ಬುಳ್ಳ ಬುಲ್ಲಮ್ಮ. ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ.ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ. ಶರಣು ಸ್ವಾಮಿ.ಬಸವ ಸ್ವಾಮಿ. ಹಾಗೂ ಬಾಲಯ್ಯ ಕ್ಯಾಂಪಿನ ಹಲವಾರು ಮಹಿಳೆಯರು ಉಪಸ್ಥಿತರಿದ್ದರು.

ಬಸವಚೇತನದ ಓಟದ ರಾಣಿ ಸೌಜನ್ಯಗೆ ಹ್ಯಾಟ್ರಿಕ್ ಚಿನ್ನದ ಸಾಧನೆ

3000, 1500 ಹಾಗೂ 800 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ; ರಾಜ್ಯಮಟ್ಟಕ್ಕೆ ಆಯ್ಕೆ

❏ ನೈಜ್ಯ ದೇಸೆ ನ್ಯೂಸ್

ತುರವಿಹಾಳ: ಗ್ರಾಮೀಣ ಪ್ರತಿಭೆಗೆ ಪರಿಶ್ರಮ, ತರಬೇತಿ ಮತ್ತು ಸೂಕ್ತ ಅವಕಾಶ ದೊರೆತರೆ ಆಕೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲೂ ತನ್ನ ಛಾಪು ಮೂಡಿಸಬಲ್ಲಳು ಎಂಬುದಕ್ಕೆ ತುರವಿಹಾಳದ ಬಸವಚೇತನ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಸೌಜನ್ಯ ಬಸವರಾಜ್ ಅವರ ಸಾಧನೆ ಸಾಕ್ಷಿಯಾಗಿದೆ.

ಪದವಿಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಸೌಜನ್ಯ ಅವರು ಒಂದೇ ಸ್ಪರ್ಧೆಯಲ್ಲಿ ಮಾತ್ರವಲ್ಲದೆ 3000 ಮೀಟ–ರ್, 1500 ಮೀಟರ್ ಹಾಗೂ 800 ಮೀಟ–ರ್ ಓಟದ ಮೂರು ವಿಭಾಗಗಳಲ್ಲೂ ಪ್ರಥ–ಮ ಸ್ಥಾನ ಪಡೆದು ಅಪೂರ್ವ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ. ಮೂರು ವಿಭಾಗಗಳಲ್ಲೂ ಅಗ್ರಸ್ಥಾನ ಪಡೆಯುವ ಮೂಲಕ ಜಿಲ್ಲೆಯ ಕ್ರೀಡಾ ವಲಯದ ಗಮನ ಸೆಳೆದಿರುವ ಅವರು ಇದೀಗ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಮೂರು ಸ್ಪರ್ಧೆ, ಮೂರು ಪ್ರಥಮ ಸ್ಥಾನ

ಕ್ರೀಡಾಕೂಟದಲ್ಲಿ 3000 ಮೀಟ–ರ್ ಓಟದಲ್ಲಿ ವೇಗ ಹಾಗೂ ಸಹನಶಕ್ತಿಯನ್ನು ಪ್ರದರ್ಶಿಸಿದ ಸೌಜನ್ಯ, 1500 ಮೀಟರ್ ಮತ್ತು 800 ಮೀಟರ್ ಓಟದಲ್ಲಿಯೂ ಎದುರಾಳಿಗಳನ್ನು ಹಿಂದಿಕ್ಕಿ ಪ್ರಥಮ ಸ್ಥಾನ ಗಳಿಸಿದರು. ಒಂದೇ ಕ್ರೀಡಾಕೂಟದಲ್ಲಿ ಮೂರು ಓಟದ ವಿಭಾಗಗಳಲ್ಲಿ ಚಾಂಪಿಯನ್ ಆಗಿರುವುದು ಅವರ ನಿರಂತರ ಅಭ್ಯಾಸ ಮತ್ತು



ಕ್ರೀಡಾ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಪರಿಶ್ರಮಕ್ಕೆ ಸಂದ ಫಲ

ಸೌಜನ್ಯ ಅವರ ಈ ಗೆಲುವಿನ ಹಿಂದೆ ನಿರಂತರ ಅಭ್ಯಾಸ, ಕಠಿಣ ತರಬೇತಿ, ಸಮಯಪಾಲನೆ, ಆತ್ಮವಿಶ್ವಾಸ ಹಾಗೂ ಸೋಲಿಗೆ ಜಗ್ಗದೆ ಮುನ್ನಡೆಯುವ ಮನೋಭಾವವಿದೆ.



ಕ್ರೀಡೆಯೊಂದಿಗೆ ಶಿಕ್ಷಣಕ್ಕೂ ಸಮಾನ ಆದ–್ಯತೆ ನೀಡುತ್ತಾ ಮುನ್ನಡೆಯುತ್ತಿರುವ ಅವರು, ಇತರ ವಿದ್ಯಾರ್ಥಿಗಳಿಗೂ ಪ್ರೇರಣೆಯಾಗಿದ್ದಾರೆ. ಗ್ರಾಮೀಣ ಭಾಗಗಳಲ್ಲಿ ಅನೇಕ ಪ್ರತಿಭೆಗಳು ಅವಕಾಶದ ಕೊರತೆಯಿಂದ ಬೆಳಕಿಗೆ ಬರುವುದಿಲ್ಲ. ಅಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅವರಿಗೆ ತರಬೇತಿ ಹಾಗೂ ಪ್ರೋತ್ಸಾಹ ನೀಡಿದಾಗ ಅವರು ದೊಡ್ಡ ಮಟ್ಟದ ಸಾಧನೆ ಮಾಡಲು ಸಾಧ್ಯ ಎಂಬುದನ್ನು ಸೌಜನ್ಯ ಅವರ ಸಾಧನೆ ತೋರಿಸಿಕೊಟ್ಟಿದೆ.

ಬಸವಚೇತನಕ್ಕೆ ಮತ್ತೊಂದು ಹೆಮ್ಮೆ

ಸೌಜನ್ಯ ಅವರ ಈ ಸಾಧನೆ ಬಸವಚೇತನ ಪದವಿಪೂರ್ವ ಕಾಲೇಜಿನ ಕ್ರೀಡಾ ಕ್ಷೇತ್ರದ ಸಾಧನೆಗಳ ಸರಣಿಗೆ ಮತ್ತೊಂದು ಗರಿಯನ್ನು ಸೇರ್ಪಡೆಗೊಳಿಸಿದೆ. ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೋಭಾವ ಬೆಳೆಸುವ ಮೂಲಕ ಶಿಕ್ಷಣದ ಜೊತೆಗೆ ಕ್ರೀಡಾ ಕ್ಷೇತ್ರದಲ್ಲಿಯೂ ಸಾಧನೆ ಮಾಡುವ ಅವಕಾಶವನ್ನು ಕಾಲೇಜು ಒದಗಿಸುತ್ತಿದೆ. ವಿದ್ಯಾರ್ಥಿನಿಯ ಸಾಧನೆಗೆ ಕಾಲೇಜಿನ ಅಧ್ಯಕ್ಷರಾದ ಕರಕಪ್ಪ ಸಾಹುಕಾರ್, ಕಾರ್ಯದರ್ಶಿ ಹಾಗೂ ಪ್ರಾಂಶುಪಾಲರಾದ ವಿರುಪಾಕ್ಷಪ್ಪ ಗಚ್ಚಿನಮನಿ, ಆಡಳಿತಾಧಿಕಾರಿ ಸಾವಿತ್ರಿ ವಿ. ಗಚ್ಚಿನಮನಿ, ಆಡಳಿತ ಮಂಡಳಿ, ಉಪನ್ಯಾಸಕ ವೃಂದ, ಪೋಷಕರು ಹಾಗೂ ಪಟ್ಟಣದ ಕ್ರೀಡಾಪ್ರೇಮಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ರಾಜ್ಯಮಟ್ಟದ ಕ್ರೀಡಾಕೂಟದಲ್ಲಿಯೂ ಸೌಜನ್ಯ ಅವರು ಇದೇ ಉತ್ಸಾಹ, ಆತ್ಮವಿಶ್ವಾಸ ಮತ್ತು ಪರಿಶ್ರಮದೊಂದಿಗೆ ಸ್ಪರ್ಧಿಸಿ ಉತ್ತಮ ಸಾಧನೆ ಮಾಡಲಿ. ರಾಜ್ಯಮಟ್ಟದಲ್ಲಿ ಬಸವಚೇತನ ಕಾಲೇಜಿನ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲಿ ಎಂದು ಆಡಳಿತ ಮಂಡಳಿ, ಶಿಕ್ಷಕರು, ಪೋಷಕರು ಹಾಗೂ ಕ್ರೀಡಾಭಿಮಾನಿಗಳು ಶುಭ ಹಾರೈಸಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಸೌಜನ್ಯ ಅವರ ಓಟ ಇದೀಗ ರಾಜ್ಯಮಟ್ಟದತ್ತ ಸಾಗಿದ್ದು, ಮುಂದಿನ ಹಂತದಲ್ಲಿ ಅವರ ಸಾಧನೆ ಹೇಗಿರಲಿದೆ ಎಂಬ ನಿರೀಕ್ಷೆ ಕ್ರೀಡಾಭಿಮಾನಿಗಳಲ್ಲಿದೆ.

ಪರಿಶಿಷ್ಟ ಪಂಗಡದ ಹಕ್ಕುಗಳ ರಕ್ಷಣೆಗೆ ಪರಿಣಾಮಕಾರಿ ಕ್ರಮ ಅಗತ್ಯ: ಜಿ. ಕುಮಾರ್ ನಾಯಕ್

ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗದ ಸಭೆಯಲ್ಲಿ ರಾಯಚೂರು ಸಂಸದರಿಂದ ಹಲವು ಪ್ರಮುಖ ವಿಚಾರಗಳ ಪ್ರಸ್ತಾಪ

❏ ನೈಜ್ಯ ದೇಸೆ ನ್ಯೂಸ್

ನವದೆಹಲಿ: ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗದ (ಓಅಖಖ) ಅಧ್ಯಕ್ಷರಾದ ಶ್ರೀ ಅಂತರ್ ಸಿಂಗ್ ಆರ್ಯ ಅವರ ಅಧ್ಯಕ್ಷತೆಯಲ್ಲಿ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಸಂಸದರು ಮತ್ತು ಶಾಸಕರ ಸಭೆ ನಡೆಯಿತು. ಸಭೆಯಲ್ಲಿ ರಾಯಚೂರು ಸಂಸದ ಜಿ. ಕುಮಾರ್ ನಾಯಕ್ ಅವರು ಭಾಗವಹಿಸಿ ಪರಿಶಿಷ್ಟ ಪಂಗಡ ಸಮುದಾಯದ ಹಕ್ಕುಗಳ ರಕ್ಷಣೆ, ಶೈಕ್ಷಣಿಕ ಅವಕಾಶಗಳು, ಸಾಮಾಜಿಕ ಭದ್ರತೆ, ಆರ್ಥಿಕ ಸಬಲೀಕರಣ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಪ್ರಮುಖ ವಿಚಾರಗಳನ್ನು ಪ್ರಸ್ತಾಪಿಸಿದರು.

ಪರಿಶಿಷ್ಟ ಪಂಗಡದ ಜನರು ಸಂವಿಧಾನಾತ್ಮಕವಾಗಿ ಹೊಂದಿರುವ ಹಕ್ಕುಗಳು ಮತ್ತು ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನಗಳು ಅರ್ಹ ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ತಲುಪುವಂತೆ ಆಡಳಿತ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಸಭೆಯಲ್ಲಿ ಅವರು ಒತ್ತಿಹೇಳಿದರು.

9ನೇ ಅನುಸೂಚಿಗೆ ಕಾಯ್ದೆ ಸೇರ್ಪಡೆ ವಿಚಾರ

ಕರ್ನಾಟಕದ SC/ST ಕಾಯ್ದೆ, 2022 ಅನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ವಿಷಯ ಪ್ರಸ್ತಾಪಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಹಕ್ಕುಗಳು ಹಾಗೂ ರಕ್ಷಣೆಗೆ ಸಂಬಂಧಿಸಿದ ಕಾನೂನುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಾದ ಕ್ರಮಗಳ ಕುರಿತು ಸಂಬಂಧಿಸಿದ ಮಟ್ಟದಲ್ಲಿ ಚರ್ಚೆ ನಡೆಯಬೇಕಿದೆ ಎಂದು ಅವರು ತಿಳಿಸಿದರು.

EMRS ಶಾಲೆಗಳ ವಿಸ್ತರಣೆ ಮತ್ತು ಮಾನದಂಡ ಪರಿಷ್ಕರಣೆ

ಪರಿಶಿಷ್ಟ ಪಂಗಡದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಅವಕಾಶ ಕಲ್ಪಿಸುವಲ್ಲಿ ಏಕಲವ್ಯ ಮಾದರಿ ವಸತಿ ಶಾಲೆಗಳು (EMRS) ಪ್ರಮುಖ ಪಾತ್ರ ವಹಿಸುತ್ತಿವೆ. ಹೀಗಾಗಿ ಹೊಸ ಶಾಲೆಗಳ ಮಂಜೂರಾತಿಗೆ ಇರುವ ಮಾನದಂಡಗಳನ್ನು ಪ್ರಸ್ತುತ ಅಗತ್ಯಗಳಿಗೆ ಅನುಗುಣವಾಗಿ ಪರಿಷ್ಕರಿಸುವ ಕುರಿತು ಸಂಸದರು ಸಭೆಯಲ್ಲಿ ಗಮನ ಸೆಳೆದರು.

ವಿಶೇಷವಾಗಿ ಹೆಚ್ಚಿನ ಖಖ ಜನಸಂಖ್ಯೆ ಹೊಂದಿರುವ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಿಗೆ ಶಿಕ್ಷಣ ಸೌಲಭ್ಯ ತಲುಪುವಂತೆ ಮಾನದಂಡಗಳನ್ನು ಪರಿಶೀಲಿಸುವ ಅಗತ್ಯವನ್ನು ಅವರು ಪ್ರಸ್ತಾಪಿಸಿದರು.

ವಿದ್ಯಾರ್ಥಿವೇತನದ ಆದಾಯ ಮಿತಿ ಹೆಚ್ಚಳಕ್ಕೆ ಮನವಿ

ST ವಿದ್ಯಾರ್ಥಿಗಳ ಉನ್ನತ ಶಿಕ್ಷಣ–



ಕ್ಕೆ ನೆರವಾಗುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (Post-Matric Scholarship) ಯೋಜನೆಯಡಿ ಪೋಷಕರ ಆದಾಯ ಮಿತಿಯನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಜಿ. ಕುಮಾರ್ ನಾಯಕ್ ಅವರು ಒತ್ತಾಯಿಸಿದರು. ಶಿಕ್ಷಣದ ವೆಚ್ಚ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಆದಾಯ ಮಿತಿಯಿಂದಾಗಿ ಅರ್ಹ ವಿದ್ಯಾರ್ಥಿಗಳು ಯೋಜನೆಯ ಪ್ರಯೋಜನದಿಂದ ಹೊರಗುಳಿಯದಂತೆ ನಿಯಮಗಳನ್ನು ಪರಿಶೀಲಿಸುವ ಅಗತ್ಯವಿದೆ ಎಂದು ಅವರು ತಿಳಿಸಿದರು.

ನಕಲಿ ಜಾತಿ ಪ್ರಮಾಣಪತ್ರಕ್ಕೆ ಕಡಿವಾಣ

ನಕಲಿ ಜಾತಿ ಪ್ರಮಾಣಪತ್ರಗಳ ಬಳಕೆಯಿಂದ ನಿಜವಾದ ಪರಿಶಿಷ್ಟ ಪಂಗಡದ ಜನರು ತಮ್ಮ ಸಂವಿಧಾನಾತ್ಮಕ ಹಕ್ಕುಗಳು ಹಾಗೂ ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗುವ ಸಾಧ್ಯತೆಯಿದೆ. ಆದ್ದರಿಂದ ಜಾತಿ ಪ್ರಮಾಣಪತ್ರಗಳ ಪರಿಶೀಲನಾ ಪ್ರಕ್ರಿಯೆಯನ್ನು ಮತ್ತಷ್ಟು ಪರಿಣಾಮಕಾರಿಗೊಳಿಸಿ, ನಕಲಿ ಪ್ರಮಾಣಪತ್ರಗಳನ್ನು ಪಡೆಯುವ ಹಾಗೂ ಬಳಸುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯವನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ST ಯುವಕರಿಗೆ ಉದ್ಯಮಶೀಲತೆಗೆ ಅವಕಾಶ

ಪರಿಶಿಷ್ಟ ಪಂಗಡದ ಯುವಜನರನ್ನು ಕೇವಲ ಉದ್ಯೋಗಾವಕಾಶಗಳತ್ತ ಮಾತ್ರವಲ್ಲದೆ ಉದ್ಯಮಶೀಲತೆಯತ್ತಲೂ ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಸಂಸದರು ಹೇಳಿದರು. ಸ್ವಯಂ ಉದ್ಯೋಗ, ಕೌಶಲ್ಯಾಭಿವೃದ್ಧಿ, ತರಬೇತಿ, ಬ್ಯಾಂಕ್ ಸಾಲ, ಸಬ್ಸಿಡಿ, ಮಾರುಕಟ್ಟೆ ಸಂಪರ್ಕ ಹಾಗೂ ಸರ್ಕಾರದ ವಿವಿಧ ಯೋಜನೆಗಳನ್ನು ಸಮನ್ವಯಗೊಳಿಸಿ ಖಖ ಯುವಕರಿಗೆ ಉದ್ಯಮ ಆರಂಭಿಸಲು ಅನುಕೂಲಕರ ವಾತಾವರಣ ನಿರ್ಮಿಸಬೇಕು ಎಂದು ಅವರು ಸಲಹೆ ನೀಡಿದರು.

ರಾಯಚೂರು ಜಿಲ್ಲೆಯ ಆದಿವಾಸಿ ಸಮುದಾಯದ ವಿಚಾರಗಳಿಗೂ ಆದ್ಯತೆ

ರಾಯಚೂರು ಜಿಲ್ಲೆಯಲ್ಲಿರುವ ಪರಿಶಿಷ್ಟ ಪಂಗಡ ಸಮುದಾಯದ ಜನರ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೂ ಸೂಕ್ತ ಗಮನ ನೀಡಬೇಕಿದೆ. ಮೂಲಸೌಕರ್ಯ, ಶಿಕ್ಷಣ, ಉದ್ಯೋಗ, ವಿದ್ಯಾರ್ಥಿವೇತನ, ವಸತಿ, ಆರೋಗ್ಯ ಮತ್ತು ಸ್ವಯಂ ಉದ್ಯೋಗಕ್ಕೆ ಸಂಬಂಧಿಸಿದ ಯೋಜನೆಗಳು ಅರ್ಹ–ರಿಗೆ ತಲುಪುವಂತೆ ಸಂಬಂಧಿಸಿದ ಇಲಾಖೆಗಳು ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು ಜಿ. ಕುಮಾರ್ ನಾಯಕ್ ಅವರು ಸಭೆಯಲ್ಲಿ ಒತ್ತಿಹೇಳಿದರು.

"ಹಕ್ಕುಗಳು ಕಾಗದದಲ್ಲಷ್ಟೇ ಉಳಿಯದೆ ಜನರಿಗೆ ತಲುಪಬೇಕು"

ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಸಂವಿಧಾನ ಹಾಗೂ ಕಾನೂನುಗಳು ನೀಡಿರುವ ಹಕ್ಕುಗಳು ಕೇವಲ ದಾಖಲೆಗಳಲ್ಲಿ ಉಳಿಯದೆ, ಅವುಗಳ ನೈಜ ಪ್ರಯೋಜನ ಜನರಿಗೆ ತಲುಪಬೇಕು. ಶಿಕ್ಷಣ, ಉದ್ಯೋಗ, ಆರ್ಥಿಕ ಅವಕಾಶ ಮತ್ತು ಸಾಮಾಜಿಕ ಭದ್ರತೆಯ ಮೂಲಕ ಆದಿವಾಸಿ ಸಮುದಾಯದ ಸಮಗ್ರ ಸಬಲೀಕರಣ–ಕ್ಕೆ ಆದ್ಯತೆ ನೀಡಬೇಕು ಎಂಬ ವಿಚಾರವನ್ನು ಸಭೆಯಲ್ಲಿ ಅವರು ಬಲವಾಗಿ ಪ್ರತಿಪಾದಿಸಿದರು.

ಆದಿವಾಸಿ ಸಮುದಾಯದ ಹಕ್ಕುಗಳು, ಕಲ್ಯಾಣ ಮತ್ತು ಸಬಲೀಕರಣಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಪ್ರಸ್ತಾಪಿಸಲಾದ ವಿಷಯಗಳ ಕುರಿತು ಸಂಬಂಧಿಸಿದ ಸಂಸ್ಥೆಗಳು ಹಾಗೂ ಇಲಾಖೆಗಳು ಅಗತ್ಯ ಕ್ರಮ ಕೈಗೊಳ್ಳುವ ನಿರೀಕ್ಷೆ ವ್ಯಕ್ತಪಡಿಸಲಾಯಿತು.

ವಚನ ದರ್ಶನ

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು ದಿಟದ ನಾಗರ ಕಂಡಡೆ
ಕೊಲ್ಲೆಂಬರಯ್ಯಾಉಂಬ ಜಂಗಮ ಬಂದಡೆ ನಡೆಯೆಂಬರು ಉಣ್ಣದ
ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾನಮ್ಮ ಕೂಡಲಸಂಗನ ಶರಣರ
ಕಂಡು ಉದಾಸೀನವ ಮಾಡಿದಡೆ ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ

ವಿಶ್ವಗುರು ಬಸವಣ್ಣನವರ ಪ್ರಸಿದ್ಧ ವಚನ. ಕಲ್ಲ ನಾಗರಹಾವಿಗೆ ಹಾಲು ಎರೆಯುವ ಮೂಢನಂಬಿಕೆ ಮತ್ತು ತೋರಿಕೆ ಭಕ್ತಿಯನ್ನು ಖಂಡಿಸಿ, ನಿಜವಾದ ಜೀವಪರ ಕಾಳಜಿ ಹಾಗೂ ಶರಣರ ಸತ್ಸಂಗದ ಮಹತ್ವವನ್ನು ಈ ವಚನ ತಿಳಿಸುತ್ತದೆ.

ಕಲ್ಲಿನ ಹಾವು ಮತ್ತು ಜೀವದ ಹಾವು ಕಲ್ಲಿನಿಂದ ಮಾಡಿದ ಹಾವಿನ ಮೂರ್ತಿ ಸಿಕ್ಕರೆ ಅದಕ್ಕೆ ಹಾಲು ಎರೆದು ಪೂಜೆ ಮಾಡುತ್ತಾರೆ. ಅದೇ ಕಣ್ಣುಮುಂದೆ ನಿಜವಾದ ಜೀವವಿರುವ ಹಾವನ್ನು ಕಂಡರೆ ಅದನ್ನು ಹೊಡೆದು ಕೊಲ್ಲುತ್ತಾರೆ.

ಜಂಗಮ ಮತ್ತು ಲಿಂಗ ಹಸಿವಿನಿಂದಊಟ, ತಿಂಡಿ ಬಯಸಿ ಮನೆಗೆ ಬರುವ ನಿಜವಾದ ಜಂಗಮರನ್ನು ಸನ್ಯಾಸಿ ಅಥವಾ ಶಿವಶರಣ-ರನ್ನು ಕಡೆಗಣಿಸಿ ಹೋಗಿ ಎನ್ನುತ್ತಾರೆ. ಆದರೆ ಊಟ ಮಾಡದ ಕಲ್ಲಿನ ಲಿಂಗಕ್ಕೆ ಮಾತ್ರ ಭಕ್ತಿಯಿಂದ ನೈವೇದ್ಯ ಬೋನವ ಹಿಡಿಯುತ್ತಾರೆ.

ಶರಣರ ನಿರಾಕರಣೆ ನಮ್ಮ ಕೂಡಲಸಂಗಮದೇವರ ನಿಜವಾದ ಶರಣರನ್ನು ಕಂಡು ಕಡೆಗಣಿಸಿದರೆ, ಅಂಥವರು ಕಲ್ಲಿಗೆ ತಾಗಿದ ಮಣ್ಣಿನ ಮುಟ್ಟೆಯಂತೆ ನಿರುಪಯುಕ್ತ ನಾಶವಾಗುತ್ತಾರೆ.

ಈ ವಚನದಲ್ಲಿ ಬಸವಣ್ಣನವರು ಜನರಲ್ಲಿ ಗೂಡು ಕಟ್ಟಿರುವ ಮೂಢ ನಂಬಿಕೆಗಳು ಮತ್ತು ಇತರೆ ಮನುಷ್ಯರನ್ನು ಕಂಡರೆ ಅವರು ಪಡುವ ಅಸೂಯೆ ಮತ್ತು ಅಸಹನೆಗಳ ಬಗ್ಗೆ ಧ್ವನಿ ಎತ್ತಿದ್ದಾರೆ.ಒಂದು ನಿರ್ಜೀವ ವಸ್ತುವಾದ ಕಲ್ಲಿನ ಹಾವಿನ ವಿಗ್ರಹಕ್ಕೆ ಭಕ್ತಿ ಇಂದ ಹಾಲನ್ನು ಸು-ರಿಯುವ ಜನ,ನಿಜವಾದ ಹಾವನ್ನು ಕಂಡಾಗ ಅದು ಒಂದು ಮೂಕ ಪ್ರಾಣಿ ಎಂದು ಅರಿಯದೆ ವಿವೇಚನೆ ಇಲ್ಲದೆ ಅದನ್ನು ಸಾಯಿಸಲು ಪ್ರಯತ್ನಿಸುತ್ತಾರೆ.ಅದೇ ರೀತಿ ಉಣ್ಣುವ ಜಂಗಮ ಹಸಿದು ಬಂದಾಗ ಒಂಚೂರು ಕರುಣೆ ಇಲ್ಲದೆ ಆತನಿಗೆ ಏನನ್ನೂ ನೀಡುವುದಿಲ್ಲ,ಬದಲಾಗಿ ತಿನ್ನದ ಲಿಂಗಕ್ಕೆ ನೈವೇದ್ಯ ನೀಡುತ್ತಾರೆ.ಈ ರೀತಿ ನಿರ್ಜೀವ ವಸ್ತುಗಳಿಗೆ ಸುರಿದು ಪೋಲು ಮಾಡುವ ಬದಲು ಹಸಿದವರಿಗೆ ನೀಡಿ ಅದನ್ನು ಸದ್ವಿನಿಯೋಗ ಮಾಡಬಹುದು ಎಂದು ಹೇಳುತ್ತಾರೆ.


ಇಲ್ಲಿ ಶರಣರ ಕಂಡು ಉದಾಸೀನವ ಮಾಡಿದರೆ ಅಂದರೆ ಜೀವಂತ ಹಾವು ಅಥವಾ ಜಂಗಮ ಆಗಿರಬಹುದು ಅಥವಾ ಹಸಿದ ಬಡವನಿರಬಹುದು ಅಥವಾ ಇನ್ನಾ್ಯವುದಾದರು ದೈವ ಸಂಕೇತದ ವಸ್ತು ಎಂದು ಭಾವಿಸಬಹುದು.ಅಂತ ಶರಣರನ್ನು ಕಡೆಗಣಿಸಿದರೆ ಅಂದರೆ ಅವರಿಗೆ ಭಕ್ತಿ ತೋರದಿದ್ದರೆ ಕಲ್ಲು ತಾಗಿದ ಮಣ್ಣಿನ ಗುಡ್ಡೆ ಅಂತೆ ಉಪಯೋಗಕ್ಕೆ ಬಾರದಂತೆ ಇವರ ಭಕ್ತಿಯೂ ಆಗುತ್ತದೆ ಎಂದು ಹೇಳುತ್ತಾರೆ.

ಒಟ್ಟಾರೆಯಾಗಿ ಈ ವಚನದ ಭಾವಾರ್ಥ ಹಸಿದವರಿಗೆ ಇಲ್ಲ ಅನ್ನಬಾರದು ಮತ್ತು ಕಲ್ಲಿಗೆ ನೈವೇದ್ಯೇ ಮಾಡುವ ಬದಲು ಅಂಥ-'ವರಿಗೆ ನೀಡಿದರೆ ಅದು ಭಕ್ತಿ ಇಂದ ಕೂಡಿರುತ್ತದೆ ಮತ್ತು ಅದು ಕೂಡಲಸಂಗಮದೇವನಿಗೆ ಅರ್ಪಿಸಿದಂತೆ ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ಕಲ್ಯಾಣ ಕರ್ನಾಟಕದ ಸಂತನಿಗೆ ಮೈಸೂರು ದಸರಾ ಗೌರವ

ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳ ಆಯ್ಕೆ ನಾಡಿನ ಜನತೆಗೆ ಹೆಮ್ಮೆಯ ಕ್ಷಣ



ನೈಜ್ಯ ದೆಸೆ ನ್ಯೂಸ್

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಕೊಪ್ಪಳದ ಗವಿಮಠದ ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳನ್ನು ಆಯ್ಕೆ ಮಾಡಿರುವುದು ಕಲ್ಯಾಣ ಕರ್ನಾಟಕದ ಜನತೆಗೆ ಮಾತ್ರವಲ್ಲದೆ ಇಡೀ ಕರ್ನಾಟಕದ ಜನತೆಗೆ ಸಂತಸ, ಗೌರವ ಮತ್ತು ಹೆಮ್ಮೆಯ ಸಂಗತಿಯಾಗಿದೆ.

ಶತಮಾನಗಳ ಇತಿಹಾಸ, ವೈಭವ ಹಾಗೂ ಪರಂಪರೆಯನ್ನು ಹೊಂದಿರುವ ಮೈಸೂರು ದಸರಾ ಮಹೋತ್ಸವಕ್ಕೆ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಸಂತರು ಚಾಲನೆ ನೀಡುತ್ತಿರುವುದು ಈ ವರ್ಷದ ದಸರಾಕ್ಕೆ ವಿಶೇಷ ಅರ್ಥವನ್ನು ನೀಡಿದೆ.

ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳು ಕೇವಲಆಧ್ಯಾತ್ಮಿಕ ಮಾರ್ಗದರ್ಶಕರಾಗಿ ಮಾತ್ರವಲ್ಲದೆ ಶಿಕ್ಷಣ, ಅನ್ನದಾಸೋಹ, ಸಮಾಜಸೇವೆ, ಜನಜಾಗೃತಿ, ಯುವಜನರ ಪ್ರೇರಣೆ ಹಾಗೂ ಮಾನವೀಯ ಮೌಲ್ಯಗಳ ಪ್ರಸಾರದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ವಿಶೇಷವಾಗಿ ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಗವಿಮಠದ ಸೇವಾ ಪರಂಪರೆ ಮಹತ್ವದ ಸ್ಥಾನವನ್ನು ಹೊಂದಿದೆ. ಜಾತಿ, ಧರ್ಮ, ವರ್ಗಗಳ ಭೇದವಿಲ್ಲದೆ ಸಮಾಜದ ಎಲ್ಲ ವರ್ಗಗಳ ಜನರನ್ನು ಒಳಗೊಂಡು ಸೇವೆ ಸಲ್ಲಿಸುವ ಮೂಲಕ ಸಮಾನತೆ, ಸಹಬಾಳ್ವೆ ಮತ್ತು ಮಾನವೀಯತೆಯ ಸಂದೇಶವನ್ನು ಸಾರುತ್ತಿರುವುದು ಶ್ಲಾಘನೀಯವಾಗಿದೆ.

ದಸರಾ ಉದ್ಘಾಟನೆಗೆ ಹೊಸ ಮೆರುಗು ಮೈಸೂರು ದಸರಾ ಕೇವಲ ಒಂದು ಉತ್ಸವವಲ್ಲ; ಅದು ಕರ್ನಾಟಕದ ಕಲೆ, ಸಂಸ್ಕೃತಿ, ಪರಂಪರೆ, ಜಾನಪದ, ಭಕ್ತಿ, ಸೌಹಾರ್ದತೆ ಮತ್ತು ವೈವಿಧ್ಯತೆಯ ಸಂಭ್ರಮವಾಗಿದೆ. ಇಂತಹ ನಾಡಹಬ್ಬಕ್ಕೆ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳಂತಹ ಸಮಾಜಮುಖಿ ಸಂತರು ಚಾಲನೆ ನೀಡುತ್ತಿರುವುದು ಆಧ-'ಾತ್ಮಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯ ಮಹತ್ವವನ್ನು ಮತ್ತಷ್ಟು ಎತ್ತಿಹಿಡಿಯಲಿದೆ.

ಅವರ ಸರಳತೆ, ಸಮಾಜದ ಬಗ್ಗೆ ಇರುವ ಕಾಳಜಿ, ಶಿಕ್ಷಣದ ಮೇಲಿನ ಒಲವು ಹಾಗೂ ಜನಸೇವೆಯ ಸಂಕಲ್ಪವು ಇಂದಿನ ಯುವಜನತೆಗೆ ವಿಶೇಷ ಪ್ರೇರಣೆಯಾಗಿದೆ. ಕಲ್ಯಾಣ ಕರ್ನಾಟಕದ ಹೆಮ್ಮೆಯ ಕ್ಷಣ ಕಲ್ಯಾಣ ಕರ್ನಾಟಕದ ನೆಲದಿಂದ ಸಮಾಜಸೇವೆ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀ-ಜಿಗಳಿಗೆ ರಾಜ್ಯದ ಪ್ರತಿಷ್ಠಿತ ನಾಡಹಬ್ಬದ ಉದ್ಘಾಟನೆಯ ಗೌರವ ದೊರೆತಿರುವುದು ಈ ಭಾಗದ ಜನರಿಗೂ ಹೆಮ್ಮೆಯ ವಿಷಯವಾಗಿದೆ. ಈ ಗೌರವವು ಒಬ್ಬ ಸಂತನಿಗೆ ದೊರೆತ ಗೌರವ ಮಾತ್ರವಲ್ಲದೆ, ಕಲ್ಯಾಣ ಕರ್ನಾಟಕದ ಸೇವಾ ಪರಂಪರೆ, ಆಧ್ಯಾತ್ಮಿಕ ಚಿಂತನೆ ಮತ್ತು ಸಮಾಜಮುಖಿ ಕಾರ್ಯಗಳಿಗೆ ದೊರೆತ ಗೌರವ ಎಂಬ ಭಾವನೆ ಜನರಲ್ಲಿ ಮೂಡಿಸಿದೆ.

ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಗೌರವಪೂರ್ವಕ ಶುಭಾಶಯಗಳು. ಅವರ ಆಶೀರ್ವಾದ ಮತ್ತು ಮಾರ್ಗದರ್ಶನ ನಾಡಿನ ಜನತೆಗೆ ಸದಾ ದೊರೆಯಲಿ. ಶಿಕ್ಷಣ, ದಾಸೋಹ, ಸಮಾಜಸೇವೆ ಹಾಗೂ ಮಾನವೀಯ ಮೌಲ್ಯಗಳ ಪ್ರಸಾರದ ಅವರ ಸಂಕಲ್ಪಗಳು ಇನ್ನಷ್ಟು ವಿಸ್ತರಿಸಲಿ. ಅವರ ಸಮಾಜಮುಖಿ ಚಿಂತನೆಗಳು ನಾಡಿನ ಯುವಜನತೆಗೆ ದಾ-ರಿದೀಪವಾಗಲಿ ಎಂದು ಹಾರೈಸುತ್ತೇನೆ.

ಮೈಸೂರು ದಸರಾ ಮಹೋತ್ಸವದ ವೇದಿಕೆಯಲ್ಲಿ ಕಲ್ಯಾಣ ಕರ್ನಾಟಕದ ಸಂತನ ಸಾನ್ನಿಧ್ಯ ನಾಡಿನ ಸಂಭ್ರಮಕ್ಕೆ ಮತ್ತೊಂದು ಹೆಮ್ಮೆಯ ಅಧ್ಯಾಯ. ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀ-ಜಿಗಳಿಗೆ ಶತಶತ ನಮನಗಳು. ಹೃತ್ಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳು.

ಜಾಲಹಳ್ಳಿಯಲ್ಲಿ ಅನಧಿಕೃತ ಹತ್ತಿ ಖರೀದಿ ಕೇಂದ್ರ: ತನಿಖೆಗೆ ಕರವೇ ಒತ್ತಾಯ

ನೈಜ್ಯ ದೆಸೆ ನ್ಯೂಸ್

ದೇವದುರ್ಗ: ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ಎಪಿಎಂಸಿ ಪರವಾನಗಿ ಅಥ-'ವಾ ಸೂಕ್ತ ಅನುಮತಿಯಿಲ್ಲದೆ ಹತ್ತಿ ಖರೀದಿ ಕೇಂದ್ರ ನಡೆಸಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದ್ದು, ಈ ಕುರಿತು ತಕ್ಷಣ ತನಿಖೆ ನಡೆಸಿ, ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ತಾಲೂಕು ಹಾಗೂ ಹೋಬಳಿ ಘಟಕದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಈ ಸಂಬಂಧ ಕರವೇ ವತಿಯಿಂದ ಎಪಿಎಂಸಿ ಕಾರ್ಯದರ್ಶಿ ಹಾಗೂ ದೇವದುರ್ಗ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗಿದೆ. ಜಾಲಹಳ್ಳಿಯಲ್ಲಿ ರೈತರಿಂದ ಹತ್ತಿ ಖರೀದಿಸಲಾಗುತ್ತಿದ್ದು, ಸಂಬಂಧಿಸಿದ ಕೇಂದ್ರವು ಎಪಿಎಂಸಿ ಇಲಾಖೆಯಿಂದ ಅಗತ್ಯ ಪರವಾನಗಿ ಪಡೆದಿದೆಯೇ ಎಂಬುದರ ಕು-ರಿತು ಸಾರ್ವಜನಿಕರಲ್ಲಿ ಅನುಮಾನ ಮೂಡಿದೆ. ಆದ್ದರಿಂದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಖರೀದಿ ಕೇಂದ್ರದ ಪರವಾನಗಿ, ದಾಖಲೆಗಳು ಹಾಗೂ ವಹಿವಾಟಿನ ಕು-ರಿತು ಸಮಗ್ರ ಪರಿಶೀಲನೆ ನಡೆಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.



ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಸಂಬಂಧಿಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಹಾಗೂ ರೈತರಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಕರವೇ ಮುಖಂಡರು ಒತ್ತಾಯಿಸಿದ್ದಾರೆ.

ಮನವಿಗೆ ಸೂಕ್ತ ಸ್ಪಂದನೆ ದೊರೆಯದಿದ್ದರೆ ಸಂಬಂಧಿಸಿದ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಕರವೇ ಮುಖಂಡರು ಎಚ್ಚರಿಕೆ ನೀಡಿದ್ದಾರೆ. ಮನವಿ ಸಲ್ಲಿಸುವ ಸಂದರ್ಭದಲ್ಲಿ ಕರವೇ ತಾಲೂಕು ಅಧ್ಯಕ್ಷ ನಂದಪ್ಪ ಪಿ. ಮಡ್ಡಿ, ಪ್ರಧಾನ ಕಾರ್ಯದರ್ಶಿ ಗುರುನಾಥ್ ರೆಡ್ಡಿ ಎಂ. ಸೇರಿದಂತೆ ಸಂಘಟನೆಯ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಉತ್ತಮ ಶಿಕ್ಷಕಿ ಪ್ರಶಸ್ತಿಗೆ ರೇಣುಕಾ ಗೊಸ್ಲೆ ಆಯ್ಕೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ವಿವಿಧ ಬಾಸಗೆ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ರಿ.), ಲಿಂಗಸಗೂರು ಇವರ ಆಯೋಜನೆಯಲ್ಲಿ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವನ್ನು ದಿನಾಂಕ 26-09-2026 ರಂದು ಬೆಳಿಗ್ಗೆ 10 ಗಂಟೆಗೆ ನಾರಾಯಣಪುರ ಮುಖ್ಯ ರಸ್ತೆಯ ಶ್ರೀ ವಿಜಯ ಮಹಾಂತೇಶ್ವರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ.



ಈ ಸಮಾರಂಭದಲ್ಲಿ ಶ್ರೀ ವಿಜಯ ಮಹಾಂತೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಕರಡಕಲ್ ನ ಶಿಕ್ಷಕಿಗೆ ಈ ಪ್ರಶಸ್ತಿ ದೊರೆತಿದೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ .ಶಾಲೆಯ ಹೆಮ್ಮೆಯ ಶಿಕ್ಷಕಿ ಕುಮಾರಿ ರೇಣುಕಾ ಗೋಸ್ಲೆ ಅವರಿಗೆ ಅವರ ಶೈಕ್ಷಣಿಕ ಸೇವೆ ಮತ್ತು ಶ್ರಮವನ್ನು ಗುರುತಿಸಿ "ಉತ್ತಮ ಶಿಕ್ಷಕಿ" ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಶಾಲೆಗೆ ಕೀರ್ತಿ ತಂದ ನಮ್ಮ ಶಾಲೆಯ ಹೆಮ್ಮೆಯ ಶಿಕ್ಷಕಿ ರೇಣುಕಾ ಗೋಸ್ಲೆ ಅವರಿಗೆ ಹೃತ್ಪೂರ್ವಕ ಅಭಿನಂದನೆ . ನಿಮ್ಮ ಶೈಕ್ಷಣಿಕ ಸೇವೆ ಮತ್ತು ಶ್ರಮ ಹೀಗೆಯೇ ಮುಂದುವರಿಯಲಿ ಎಂದು ಶಾಲೆಯ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ಶುಭ ಕೋರಿದ್ದಾರೆ.

ತಾಂಡವಪುರ ಗ್ರಾಮದ ಶ್ರೀ ಬಸವೇಶ್ವರ ಯುವಕರ ಸಂಘದ ವತಿಯಿಂದ ಅದ್ದೂರಿ ಗಣೇಶೋತ್ಸವ ಕಪಿಲ ನದಿಯಲ್ಲಿ ವಿಸರ್ಜನೆ

ನೈಜ್ಯ ದೆಸೆ ನ್ಯೂಸ್

ತಾಂಡವಪುರ ಸೆಪ್ಟೆಂಬರ್ 25 ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಚಿಕ್ಕಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸುರುವ ತಾಂಡವಪುರ ಗ್ರಾಮದ ಶ್ರೀ ಬಸವೇಶ್ವರ ಯುವಕರ ಸಂಘದ ವತಿಯಿಂದ ಅದ್ದೂ-ರಿಯಾಗಿ ಗೌರಿ ಗಣೇಶ ಹಬ್ಬವನ್ನು ಆಚರಿಸಿ ಕಪಿಲ ನದಿಯಲ್ಲಿ ವಿಸರ್ಜನೆ ಮಾಡಿದರು ಗ್ರಾಮದ ಮಠದಲ್ಲಿ ಗೌರಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಕಳೆದು ಒಂದು ವಾರಗಳಿಂದ ಪ್ರತಿದಿನ ವಿಶೇಷ ಪೂಜೆ ಅಭಿಷೇಕ ಮಾಡುವ ಮೂಲಕ ಭಕ್ತಿ ಭಾವದಿಂದ ಗೌರಿ ಗಣೇಶ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಿದರು

ಗಣೇಶ್ ಮೂರ್ತಿಯನ್ನು ಟ್ರಾಕ್ಟರ್ ನಲ್ಲಿ ಕೂರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಪಟಾಕಿ ಸಿಡಿಸಿ ಭಕ್ತಿ ಭಾವದಿಂದ ಪೂಜಿ ಸಲ್ಲಿಸಿ ಅದ್ದೂರಿಯಾಗಿ ಗಣೇಶ ಉತ್ಸವವನ್ನು ಆಚರಿಸಲಾಯಿತು ಗಣೇಶನ ಮೆರವಣಿಗೆ ಎಂದರೆ ಭಯ ಭೀತಿಯಿಂದ ಆಚರಿಸುವ ವಾತಾವರಣ ನಿರ್ಮಾಣವಾಗಿದೆ ಆದರೆ ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ತಾಂಡವಪುರ ಗ್ರಾಮಸ್ಥರು ಭಕ್ತಿ ಭಾವದಿಂದ ಶಾಂತಿಯುತವಾಗಿ ಸ್ನೇಹ ಸೌವಾದ ಹಿತವಾಗಿ ಗ್ರಾಮಸ್ಥರು ಗಣೇಶನ ಹಬ್ಬವನ್ನು ಹಾಗೂ ಮೆರವಣಿಗೆಯನ್ನು ಆಚ-'ರಿಸುತ್ತಿರುವುದು ವಿಶೇಷವಾಗಿತ್ತು ಮುನ್ನೆಚರಿಕೆ ಕ್ರಮವಾಗಿ ನಂಜನಗೂಡು ಗ್ರಾಮಾಂತರ ಪೊಲೀಸರು ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದರು ಈ ಸಂದರ್ಭದಲ್ಲಿ ಗ್ರಾಮದ ಗೌಡಿಕೆ ಶಿವಣ್ಣ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಮಹಾದೇವ ಮಧು ಪಾಟೀಲ್ ಹಾಗೂ ಶ್ರೀ ಬಸವೇಶ್ವರ ಯುವಕರ ಸಂಘದ ಪದಾಧಿಕಾ-ರಿಗಳು ಗ್ರಾಮದ ಮುಖಂಡರುಗಳು ಹಾಜರಿದ್ದರು



ಸಿಂಧನೂರು ರೈತರ ಸಮಸ್ಯೆಗಳ ಪರಿಹಾರಕ್ಕೆ ಧ್ವನಿ ಎತ್ತಿದ ಬಸನಗೌಡ ಬಾದರ್ಲಿ

ವಿಧಾನಪರಿಷತ್‌ನಲ್ಲಿ ಬರ ಪರಿಹಾರ, ನೀರಾವರಿ, ವಿದ್ಯುತ್, ಜೋಳದ ಬಾಕಿ ಹಣ ಹಾಗೂ ಭತ್ತ ಮಂಡಳಿ ಸ್ಥಾಪನೆ ಕುರಿತು ಪ್ರಸ್ತಾಪ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಸಿಂಧನೂರು ಸೇರಿದಂತೆ ರಾಯಚೂರು ಜಿಲ್ಲೆಯ ರೈತರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ವಿಧಾನಪರಿಷತ್ ಕಲಾಪದಲ್ಲಿ ಪ್ರಸ್ತಾಪಿಸಿದ ವಿಧಾನಪ-ರಿಷತ್ ಸದಸ್ಯ ಬಸನಗೌಡ ಬಾದರ್ಲಿ, ರೈತರ ಸಂಕಷ್ಟಕ್ಕೆ ತ್ವರಿತವಾಗಿ ಸ್ಪಂದಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರದ ಗಮನ ಸೆಳೆದರು.

ಬರ ಪರಿಸ್ಥಿತಿ, ನೀರಾವರಿ ಕೊರತೆ, ಬೆಳೆ ನಷ್ಟ, ಬೆಳೆ ವಿಮೆ ಹಾಗೂ ಪರಿಹಾರ ಮೊತ್ತದ ವಿಳಂಬ, ಕೃಷಿಗೆ ಅಗತ್ಯವಿರುವ ವಿದ್ಯುತ್ ಪೂರೈಕೆ ಮತ್ತು ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದ ಬಾಕಿ ಹಣ ಸೇರಿದಂತೆ ಹಲವು ವಿಷಯಗಳನ್ನು ಅವರು ಸದನದಲ್ಲಿ ಪ್ರಸ್ತಾಪಿಸಿದರು.

ಅರ್ಹ ರೈತರಿಗೆ 13.56 ಕೋಟಿ ಬರ ಪರಿಹಾರ ಸಿಂಧನೂರು ಕ್ಷೇತ್ರದ ಅರ್ಹ ರೈತರಿಗೆ 1,356 ಲಕ್ಷ (13.56 ಕೋಟಿ) ಬರ ಪರಿಹಾರ ಮೊತ್ತವನ್ನು ಶೀಘ್ರವಾಗಿ ಬಿಡುಗಡೆ ಮಾಡಿ, ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಬೇಕು ಎಂದು ಬಸನಗೌಡ ಬಾದರ್ಲಿ ಒತ್ತಾಯಿಸಿದರು. ಬರದಿಂದಾಗಿ ಕೃಷಿ ಚಟುವಟಿಕೆಗಳಿಗೆ ತೀವ್ರ ತೊಂದರೆಯಾಗಿರುವ ಸಂದರ್ಭದಲ್ಲಿ ಪರಿಹಾರ ಮೊತ್ತ ರೈತರ ಕೈ ಸೇರುವುದರಲ್ಲಿ ವಿಳಂಬವಾಗಬಾರದು. ಅರ್ಹ ಫಲಾನುಭವಿಗಳ ಪರಿಶೀಲನೆ ಹಾಗೂ ಹಣ ವರ್ಗಾವಣೆ ಪ್ರಕ್ರಿಯೆಯನ್ನು ತ್ವ-ರಿತಗೊಳಿಸಬೇಕು ಎಂದು ಅವರು ಹೇಳಿದರು.

ಟೈಲ್‌ಎಂಡ್ ರೈತರಿಗೆ ಸಮರ್ಪಕ ನೀರು ಸಿಂಧನೂರು ಭಾಗದ ಟೈಲ್‌ಎಂಡ್ ಪ್ರದೇಶಗಳಿಗೆ ನೀರು ತಲುಪಿಸುವುದು ಪ್ರಮುಖ ಸವಾಲಾಗಿದೆ. ಕಾಲುವೆಗಳ ಕೊನೆಯ ಭಾಗದಲ್ಲಿರುವ ರೈತರಿಗೆ ಸಮರ್ಪಕ ನೀರು ದೊರೆಯುವಂತೆ ನೀರಾವರಿ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಅವರು ಆಗ್ರಹಿಸಿದರು. ನೀರಾವರಿ ನೀರು ಸಮರ್ಪಕವಾಗಿ ದೊರೆತರೆ ಮಾತ್ರ ರೈತರು ತಮ್ಮ ಬೆಳೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿ ನೀರಿನ ಲಭ್ಯತೆ ಮತ್ತು ಸಮರ್ಪಕ ವಿತರಣೆಗೆ ಸಂಬಂಧಿಸಿದಂತೆ ಅಧಿಕಾರಿಗಳು ನಿರಂತರ ನಿಗಾ ವಹಿಸಬೇಕು ಎಂದು ಹೇಳಿದರು.

ಜೋಳದ ಬಾಕಿ ಹಣ ಬಿಡುಗಡೆಗೆ ಒತ್ತಾಯ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿರುವ ಜೋಳಕ್ಕೆ ಸಂಬಂಧಿಸಿದ ಬಾಕಿ ಹಣವನ್ನು ರೈತರಿಗೆ ಶೀಘ್ರವಾಗಿ ಪಾವತಿಸುವಂತೆ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಬಸನಗೌಡ ಬಾದರ್ಲಿ ಒತ್ತಾಯಿಸಿದರು.

ಕೃಷಿ ಉತ್ಪನ್ನ ಮಾರಾಟ ಮಾಡಿದ ನಂತರವೂ ಹಣಕ್ಕಾಗಿ ರೈತರು ಕಾಯುವ ಪರಿಸ್ಥಿತಿ ನಿರ್ಮಾಣವಾಗಬಾರದು. ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದ ಬಾಕಿ ಮೊತ್ತವನ್ನು ತ್ವರಿತವಾಗಿ ಬಿಡುಗಡೆ ಮಾಡಬೇಕು ಎಂದು ಹೇಳಿದರು. ಬೆಳೆ ವಿಮೆ, ಪರಿಹಾರ ವಿಳಂಬವಾಗದಿರಲಿ ಬರ ಹಾಗೂ ಬೆಳೆ ನಷ್ಟದಿಂದ ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ಬರ ಪರಿಹಾರ ಮತ್ತು ಬೆಳೆ ವಿಮೆ ಮೊತ್ತವನ್ನು ವಿಳಂಬವಿಲ್ಲದೆ ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

ರೈತರ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ವ್ಯವಸ್ಥೆಯನ್ನು



ಸರಳಗೊಳಿಸುವುದು ಹಾಗೂ ಅರ್ಹ ರೈತ-ರಿಗೆ ನಿಗದಿತ ಅವಧಿಯಲ್ಲಿ ಹಣ ತಲುಪುವಂತೆ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು.

ನವಲಿ ಯೋಜನೆಗೆ ವೇಗ ನೀಡಲು ಆಗ್ರಹ ರಾಯಚೂರು ಜಿಲ್ಲೆಯ ಬಹುದಿನಗಳ ಬೇಡಿಕೆಯಾಗಿರುವ ನವಲಿ ಸಮಾನಾಂತರ ಜಲಾಶಯ ಯೋಜನೆಗೆ ವೇಗ ನೀಡಬೇಕು ಎಂದು ಬಸನಗೌಡ ಬಾದರ್ಲಿ ಅವರು ಸದನದಲ್ಲಿ ಪ್ರಸ್ತಾಪಿಸಿದರು.

ಜಿಲ್ಲೆಯ ನೀರಾವರಿ ಅಭಿವೃದ್ಧಿಗೆ ದೀರ್ಘಕಾಲೀನ ಪರಿಹಾರ ಒದಗಿಸುವ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಆದ್ಯತೆ ನೀಡಬೇಕು. ರೈತರ ಕೃಷಿ ಚಟುವಟಿಕೆಗಳಿಗೆ ಸ್ಥಿರವಾದ ನೀರಿನ ಮೂಲಗಳನ್ನು ಕಲ್ಪಿಸುವುದು ಅಗತ್ಯವಾಗಿದೆ ಎಂದು ಅವರು ಹೇಳಿದರು. ಜವಳಗೇರಾ ಕೆರೆ ಯೋಜನೆ ಶೀಘ್ರ ಆರಂಭವಾಗಲಿ ಜವಳಗೇರಾ ಅಚುಕಟ್ಟು ವ್ಯಾಪ್ತಿಯ 7,000 ಎಕರೆ ಪ್ರದೇಶಕ್ಕೆ ಅನುಕೂಲವಾಗುವ ?359 ಕೋಟಿ ಅಂ-ದಾಜು ವೆಚ್ಚದ ಕೆರೆ ನಿರ್ಮಾಣ ಯೋಜನೆಯ ಆಕಖು ಸಿದ್ಧವಾಗಿರುವುದರಿಂದ ಕಾಮಗಾರಿಯನ್ನು ಶೀಘ್ರ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಯೋಜನೆ ಅನುಷ್ಠಾನಗೊಂಡರೆ ಸಿಂಧನೂರು ತಾಲ್ಲೂಕಿನ 25 ಗ್ರಾಮಗಳು ಹಾಗೂ 6 ಕ್ಯಾಂಪುಗಳ ರೈತರಿಗೆ ಅನುಕೂಲವಾಗಲಿದೆ ಎಂದು ಸದನದ ಗಮನಕ್ಕೆ ತಂದರು. ಕೃಷಿಗೆ 9 ಗಂಟೆ ವಿದ್ಯುತ್ ನೀಡಲು ಮನವಿ ರೈತರ ಕೃಷಿ ಚಟುವಟಿಕೆಗಳಿಗೆ ಪ್ರಸ್ತುತ ನೀಡಲಾಗುತ್ತಿರುವ 6 ಗಂಟೆಗಳ ವಿದ್ಯುತ್ ಪೂರೈಕೆಯನ್ನು ಕನಿಷ್ಠ 9 ಗಂಟೆಗಳಿಗೆ ಹೆಚ್ಚಿಸಬೇಕು ಎಂದು ಅವರು ಆಗ್ರಹಿಸಿದರು.

ನೀರಾವರಿ ವ್ಯವಸ್ಥೆ ಇದ್ದರೂ ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದಿದ್ದರೆ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಕೃಷಿ ಪಂಪ್‌ಸೆಟ್‌ಗಳಿಗೆ ಅಗತ್ಯ ಪ್ರಮಾಣದಲ್ಲಿ ವಿದ್ಯುತ್ ಒದಗಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. ಸಿಂಧನೂರು ಭತ್ತ ಮಂಡಳಿ ಸ್ಥಾಪನೆಗೆ ಬೇಡಿಕೆ ಸಿಂಧನೂರು ತಾಲ್ಲೂಕಿನ ಭತ್ತ ಬೆಳೆಗಾರರ ಹಿತದೃಷ್ಟಿಯಿಂದ ಸಿಂಧನೂರು ಭತ್ತ ಮಂಡಳಿ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಬಸನಗೌಡ ಬಾದರ್ಲಿ ಒತ್ತಾಯಿಸಿದರು.

ಭತ್ತದ ಖರೀದಿ, ಮಾರುಕಟ್ಟೆ, ಬೆಲೆ ಹಾಗೂ ರೈತರಿಗೆ ಸಂಬಂಧಿಸಿದ ಇತರ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲಿ ಪರಿಣಾಮಕಾರಿ ವ್ಯವಸ್ಥೆ ಕಲ್ಪಿಸುವ ಅಗತ್ಯವಿದೆ ಎಂದು ಅವರು ಹೇಳಿದರು. “ರೈತನ ಬದುಕಿಗೆ ನೀರು, ವಿದ್ಯುತ್ ಮತ್ತು ನ್ಯಾಯಯುತ ಬೆಲೆ ಅಗತ್ಯ” “ರೈತನ ಹೊಲದಲ್ಲಿ ಬೆಳೆ ಉಳಿಯಬೇಕು; ರೈತನ ಕೈಯಲ್ಲಿ ಹಣ ಇರಬೇಕು. ರೈತನ ಬದುಕಿಗೆ ನೀರು, ವಿದ್ಯುತ್ ಮತ್ತು ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಸಿಗಬೇಕು” ಎಂಬ ಆಶಯದೊಂದಿಗೆ ರೈತರ ಸಮಸ್ಯೆಗಳನ್ನು ಸದನದಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಬಸನಗೌಡ ಬಾದರ್ಲಿ ಹೇಳಿದರು. ರೈತರ ಸಂಕಷ್ಟಕ್ಕೆ ರಾಜ್ಯ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರವೂ ಸ್ಪಂದಿಸಬೇಕು. ಬರ, ಬೆಳೆ ನಷ್ಟ ಹಾಗೂ ಕೃಷಿ ಉತ್ಪನ್ನಗಳ ಪಾವತಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ತ್ವರಿತ ಪರಿಹಾರ ದೊರೆಯುವಂತೆ ಎರಡೂ ಸರ್ಕಾರಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕಿದೆ ಎಂದು ಅವರು ತಿಳಿಸಿದರು.

ಪಂಚ ಗ್ಯಾರಂಟಿ, ವಿದ್ಯಾರ್ಥಿಗಳ ಬಸ್‌ಪಾಸ್ ಪ್ರಸ್ತಾಪ ಇದೇ ಸಂದರ್ಭದಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಬರ ಪರಿಸ್ಥಿತಿಯಲ್ಲಿಯೂ ಜನಸಾಮಾನ್ಯರಿಗೆ ಆರ್ಥಿಕ ನೆರವು ಒದಗಿಸುತ್ತಿರುವ ಕುರಿತು ಸದನದಲ್ಲಿ ಪ್ರಸ್ತಾಪಿಸಲಾಯಿತು.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಜಾ-ರಿಗೊಂಡಿರುವ ಉಚಿತ ಬಸ್ ಪಾಸ್ ಯೋಜನೆಯ ಬಗ್ಗೆಯೂ ಸದನದ ಗಮನ ಸೆಳೆಯಲಾಯಿತು. ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳಿಗೆ ಸಾರಿಗೆ ವೆಚ್ಚದ ಹೊರೆ ಕಡಿಮೆ ಮಾಡುವ ಉದ್ದೇಶದಿಂದ ಈ ಯೋಜನೆಯ ಮಹತ್ವವನ್ನು ಪ್ರಸ್ತಾಪಿಸಲಾಯಿತು. ಸಿಂಧನೂರು ಕ್ಷೇತ್ರದ ರೈತರ ನೀರಾವರಿ, ಪರಿಹಾರ, ವಿದ್ಯುತ್, ಕೃಷಿ ಉತ್ಪನ್ನಗಳ ಖರೀದಿ ಹಾಗೂ ಭತ್ತ ಬೆಳೆಗಾರರ ಹಿತಾಸಕ್ತಿಗೆ ಸಂಬಂಧಿಸಿದ ಬೇಡಿಕೆಗಳು ವಿಧಾನಪರಿಷತ್‌ನಲ್ಲಿ ಪ್ರಸ್ತಾಪಗೊಂಡಿದ್ದು, ಸಂಬಂಧಿಸಿದ ಇಲಾಖೆಗಳು ಅಗತ್ಯ ಕ್ರಮ ಕೈಗೊಳ್ಳುವ ನಿರೀಕ್ಷೆ ವ್ಯಕ್ತವಾಗಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101